ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

**6. ನಿಯಮ 69ರ ಮೇರೆಗೆ**

**ವಿಷಯ: ಹೈದರಾಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಸಿಇಟಿನಲ್ಲಿ ಸೀಟುಗಳನ್ನು ನಿಗದಿ ಪಡಿಸುವ ಬಗ್ಗೆ.**

ಉಪಾಧ್ಯಕ್ಷರು: ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ ಈಗಾಗಲೇ ಮುಗಿದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ಪ್ರಮುಖವಾದ ವಿಚಾರ ಹೇಳಬೇಕು. ನನ್ನದೂ ಸಹ ತಪ್ಪಾಗಿದೆ. ಮಾತನಾಡತಕ್ಕ ಸಂದರ್ಭದಲ್ಲಿ ಈ ಸಿಇಟಿನಲ್ಲಿ ರಿಸರ್ವೇಷನ್ ಮಾಡತಕ್ಕ ವಿಚಾರದಲ್ಲಿ ನಮ್ಮ ಉತ್ತರ ಕರ್ನಾಟಕದ ಶಾಸಕರು ಬಹಳ ದಿನಗಳಿಂದ ಅವರ ಆಕ್ರೋಶವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಪ್ರಾದೇಶಿಕ ಅಸಮ ತೋಲನದ ಬಗ್ಗೆ ಡಾ:ನಂಜುಡಪ್ಪನವರು ಒಂದು ವರದಿ ಕೊಟ್ಟಿದ್ದಾರೆ ಅದಕ್ಕೆ ಇಡೀ ಸಭೆ ನಾವೊಂದು ಸಂವಿಧಾನದಲ್ಲಿಬದಲಾವಣೆ ತರಬೇಕು ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವರ ಹತ್ತಿರ ಪೆಂಡಿಂಗ್ ಇದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾಗಿರತಕ್ಕಂಥಹ ಹಂಪನಗೌಡರು ಮತ್ತು ಕರಡಿ ಸಂಗಣ್ಣನವರು ಮಾತನಾಡುತ್ತಾರೆ. ನಿನ್ನೆ ದಿನ ನಾನು ವಿನಂತಿ ಮಾಡಿಕೊಂಡೆ. ದಯಮಾಡಿ ಅವರು ಮಾತನಾಡಬೇಕೆಂದು ಇದ್ದಾರೆಂದು ವಿನಂತಿ ಮಾಡಿಕೊಂಡೆ. ದಯಮಾಡಿ ಅವರುಗಳಿಗೆ ಒಂದು ಐದೈದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಹಂಪನಗೌಡರು ಐದೇ ನಿಮಿಷ ಮಾತನಾಡಬೇಕು.

ಶ್ರೀ ಹಂಪನಗೌಡ ಬದರ್ಲಿ (ಸಿಂಧನೂರು): ಮಾನ್ಯ ಉಪಾಧ್ಯಕ್ಷರೆ, ಇವತ್ತು ತಾವು ನಮ್ಮ ಹೈದರಾಬಾದ್ ಕರ್ನಾಟಕದ ಶಾಸಕರಿಗೆ ಆ ಭಾಗದ ಸಿಇಟಿ ಘಟಕದಿಂದ ಆಗಿರತಕ್ಕ ಅನ್ಯಾಯದ ಬಗ್ಗೆ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ಹೈದರಾಬಾದ್-ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿರತಕ್ಕಂಥಹ ಒಂದುಪ್ರದೇಶ. ಈ ಪ್ರದೇಶದ ವಿದ್ಯಾರ್ಥಿಗಳು ಸುಮಾರು ನಾಲ್ಕು ಜಿಲ್ಲೆಗಳು ಅದರಲ್ಲಿ ಒಳಗೊಳ್ಳುತ್ತವೆ. ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಈ ನಾಲ್ಕು ಜಿಲ್ಲೆಗಳ ವಿದ್ಯಾರ್ಥಿಗಳು, ಉತ್ತರ ಕರ್ನಾಟಕ ಬಾಂಬೆ-ಕರ್ನಾಟಕ ಮತ್ತು ಹಳೆಯ ಮೈಸೂರಿನ ವಿದ್ಯಾರ್ಥಿಗಳ, ಈ ಮೆರಿಟ್ ಆಧಾರದ ಮೇಲೆ ನಮ್ಮ ಭಾಗದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ವಿದ್ಯಾರ್ಹತೆ ಬಹಳ ಕಡಿಮೆ. ಶಿಕ್ಷಣ ಗುಣಮಟ್ಟವೂ ಕೂಡ ಬಹಳ ಕಡಿಮೆ ಇರುವುದರಿಂದ ವೃತ್ತಿಪರ ಶಿಕ್ಷಣದಲ್ಲಿ ಅಭ್ಯಾಸ ಮಾಡಲು ಬಹಳಷ್ಟು ಅನುಕೂಲತೆಗಳು ಕಡಿಮೆ ಇದ್ದಾವೆ. ಈ ಅನುಕೂಲತೆಗಳನ್ನು ಸರಿಪಡಿಸಬೇಕಾದರೆ ಈಗೇನು ಸರ್ಕಾರ ಹೊಸದಾಗಿ ಸಿಇಟಿ ಘಟಕಕ್ಕೆ ನಿಯಮಗಳನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ ನಾವು ಒತ್ತಾಯಪಡಿಸುವುದು ಇಷ್ಟೇ. ಯಾವ ರೀತಿ ಹಿಂದೆ ಈ ಘಟಕದಲ್ಲಿ ಕೆಲವು ನಿಯಮಗಳನ್ನು ಮಾಡಿದ್ದೀರಿ, ಸೈನಿಕರ ಮಕ್ಕಳಿಗೆ ಐದು ಪರ್ಸೆಂಟ್ ಸೀಟುಗಳನ್ನು ನಿಗದಿ ಮಾಡಿದ್ದೀರಿ. ಕ್ರೀಡಾಪಟುಗಳಿಗೆ ಕೆಲವು ಸೀಟುಗಳನ್ನು ನಿಗದಿ ಮಾಡಿದ್ದೀರಿ ಮತ್ತು ಅದೇ ರೀತಿ ಈ ಬೇರೆ ಬೇರೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರತಕ್ಕಂಥಹ ಗಡಿನಾಡ ಕನ್ನಡಿಗರಿಗೂ ಕೂಡ ಕೆಲವು ಸೀಟುಗಳನ್ನು ನಿಗದಿ ಮಾಡಿದ್ದೀರಿ. ಅದೇ ರೀತಿ ನಮ್ಮ ಹೈದರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ವೃತ್ತಿ ಪರ ಶಿಕ್ಷಣದಲ್ಲಿ

ಅಭ್ಯಾಸ ಮಾಡಲು ಅನುಕೂಲ ಮಾಡತಕ್ಕಂಥಹ ವಾತಾವರಣವನ್ನು ಏಕೆ ತಾವು ನಿರ್ಮಾಣ ಮಾಡಬಾರದು? ನೀವು ತರತಕ್ಕ ಕಾನೂನಿನಲ್ಲಿ ತಿದ್ದುಪಡಿಯಲ್ಲಿ ಈ ವಿಷಯವನ್ನೂ ಕೂಡ ಗಂಭೀರವಾಗಿ ತೆಗೆದುಕೊಂಡು ಈ ಹೈದರಾಬಾದ್-ಕರ್ನಾಟಕ ವಿದ್ಯಾರ್ಥಿಗಳಿಗೆ ಇಷ್ಟು ಪರ್ಸೆಂಟ್ ಸೀಟು ಎಂದು ನಿಗದಿ ಪಡಿಸಬೇಕು ಎಂಬ ಒಂದು ಒತ್ತಾಯವನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಹೆಚ್ಚಿಗೆ ಗಮನ ಹರಿಸಬೇಕು ಎಂಬ ಒತ್ತಾಯ. ತಾವೇನು ಈಗ ತಿದ್ದುಪಡಿ ತರುತ್ತೀರಿ, ಅದರಲ್ಲಿಯೇ ಈ ವಿಷಯ ಸೇರಿಸಿ ಆ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಲು ಅನುಕೂಲ ಮಾಡಿಕೊಡಬೇಕೆಂಬ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ, ಧನ್ಯವಾದಗಳು.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಉಪಾಧ್ಯಕ್ಷರೆ, ವೃತ್ತಿ ಪರ ಶಿಕ್ಷಣದ ವಿಷಯದಲ್ಲಿ ನಾನೂ ಕೂಡ ಮಾತನಾಡಬೇಕು. ನಮ್ಮ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಮೂಲ ಭೂತ ಸೌಲಭ್ಯಗಳ ಕೊರತೆ ಇದೆ. ಏಕೆಂದರೆ ಈಗಾಗಲೇ ಡಾ: ನಂಜುಂಡಪ್ಪನವರು ಒಂದು ವರದಿಯನ್ನೂ ಕೂಡ ಸರ್ಕಾರಕ್ಕೆ ಸಬ್ಮಿಟ್ ಮಾಡಿದ್ದಾರೆ. ಆ ವರದಿಯಲ್ಲಿ ಕೂಡ ಏನು ಹೇಳಿದ್ದಾರೆ ಎಂದರೆ ಪ್ರಾಥಮಿಕ ಶಿಕ್ಷಣ ಇರಬಹುದು, ಮತ್ತು ಪ್ರೌಢಶಿಕ್ಷಣ ಇರಬಹುದು, ಹಾಗೆಯೇ ಉನ್ನತ ಶಿಕ್ಷಣ ಇರಬಹುದು. ಇದನ್ನು ದಕ್ಷಿಣ ಕರ್ನಾಟಕಕ್ಕೆ ಮತ್ತು ಉತ್ತರ ಕರ್ನಾಟಕಕ್ಕೆ ಹೋಲಿಕೆ ಮಾಡಿದರೆ ಬಹಳಷ್ಟು ಪ್ರಮಾಣದಲ್ಲಿ ನಾವು ಬಹಳ ಹಿಂದೆ ಇದ್ದೇವೆ ಎನ್ನುವ ಬಗ್ಗೆ ವರದಿಯಲ್ಲಿ ಕೂಡ ಇದೆ. ಆ ವರದಿ ಇರುವುದರಿಂದ ನಾವು ಕೂಡ ಇನ್ನೊಬ್ಬರ ಹಾಗೆ ಸರಿಸಮಾನವಾಗಿ ಇವತ್ತು ಬಾಳ ಬೇಕು. ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಘೋಷಣೆ ಮಾಡಿದ್ದಾರೆ. ಈ ರೀಜನಲ್ ಇಂಬ್ಯಾಲೆನ್ಸ್ ಸರಿ ಮಾಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಈಗ ಅವಕಾಶ ಏನು ಅಂದರೆ ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ನಮ್ಮ ಭಾಗದ ಮಕ್ಕಳಿಗೆ ಕೂಡ ಒಂದು ಪ್ರತಿಶತ ಮಾನ್ಯ ನಮ್ಮ ಹಂಪನಗೌಡ ಬಾದರ್ಲಿಯವರು ಹೇಳಿದ ಹಾಗೆ ಇಷ್ಟು ರಿಸರ್ವೇಷನ್, ಇಷ್ಟು ಕೋಟಾ ಎಂದು ನಮಗೆ ಫಿಕ್ಸ್ ಮಾಡಿದರೆ ಅಲ್ಲಿಯ ನಮ್ಮ ಮಕ್ಕಳೂ ಕೂಡ ಆ ಒಂದು ಮಟ್ಟಕ್ಕೆ ಹೋಗಲಿಕ್ಕೆ ಮತ್ತು ಹುದ್ದೆಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಆಗುತ್ತದೆ ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಎಜ್ಯುಕೇಷನ್ ಮಿನಿಸ್ಟರ್ ಆದ ಡಾ: ಪರಮೇಶ್ವರ್ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮ ರಾಷ್ಟ್ರದ ಸುಪ್ರೀಂ ಕೋರ್ಟ್ ನಮ್ಮ ತಾಂತ್ರಿಕ ವಿದ್ಯಾಭ್ಯಾಸದ ವಿದ್ಯಾರ್ಥಿಗಳ ಬಗ್ಗೆ ಒಂದು ಅತ್ಯಂತ ಕಠಿಣವಾದ ತೀರ್ಪನ್ನು ಕೊಟ್ಟು ಇವತ್ತು ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಮತ್ತು ಅತ್ಯಂತ ಬಡತನದಿಂದ ಜೀವನ ಮಾಡತಕ್ಕಂಥವರು ಒಳ್ಳೆಯ ಅಂಕಗಳನ್ನು ಪಡೆದಿದ್ದಾಗ ಆ ಅಂಕಗಳ ಆಧಾರದ ಮೇಲೆ ಸಿಗತಕ್ಕ ಸವಲತ್ತಿನಿಂದ ವಂಚಿತರಾಗಿದ್ದಾರೆ. ಸುಪ್ರೀಂ ಕೋರ್ಟ್ ನೀಡಿರುವ ತೀರ್ಮಾನದ ಒಂದು ಪ್ಯಾರಾಗಳ ಬಗ್ಗೆ ಆಗಲೀ ಅಥವಾ ತೀರ್ಮಾನದ ವಿಚಾರಗಳ ಬಗ್ಗೆ ಆಗಲೀ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಸುರೇಶ್ ಕುಮಾರ್ ರವರು ಮತ್ತು ಮಿತ್ರರು ಇದರ ಬಗ್ಗೆ ಚೆನ್ನಾಗಿ ಸ್ಟಡಿ ಮಾಡಿ ಪ್ಯಾರಾವೈಸ್ ವಿವರಣೆಗಳನ್ನು ಕೊಟ್ಟಿದ್ದಾರೆ. ಇದು ಕೇವಲ ವಿರೋಧ ಪಕ್ಷದವರಿಗೆ ಆಗಲೀ ಅಥವಾ ಬೇರೆಯವರಿಗಾಗಲೇ, ಇದು ಸರ್ಕಾರವೇ ತಪ್ಪು

ಮಾಡುತ್ತದೆ ಎಂದು ಹೇಳುವುದರ ಜೊತೆಯಲ್ಲಿ ನಾವೂ ಸಹ ಇದರ ಪರವಾಗಿದ್ದೇವೆ, ಎಂದು ಹೇಳಬೇಕು. ಏಕೆಂದರೆ ಈ ಸದನದಲ್ಲಿ ಚುನಾಯಿತರಾಗಿ ಬಂದಿರತಕ್ಕ ಎಲ್ಲಾ ಸದಸ್ಯರದ್ದೂ ಸಹಿತ ಏನು ಸವಲತ್ತಿನಿಂದ ವಂಚಿತರಾಗಿದ್ದಾರೋ ಆ ಜನಗಳಿಗೆ ಸೌಕರ್ಯ ಕೊಡುವುದರ ಬಗ್ಗೆ ಅಥವಾ ನ್ಯಾಯದಿಂದ ವಂಚಿತರಾಗಿರತಕ್ಕವರಿಗೆ ಯಾವ ನ್ಯಾಯವನ್ನು ದೊರಕಿಸಿಕೊಡಬೇಕೋ ಅದರ ಪರವಾಗಿ ಇರುವುದರಿಂದ, ಇಲ್ಲಿಗೆದ್ದು ಬಂದಿರತಕ್ಕವರು ಎಲ್ಲರೂ ಸೇರಿ ಇವತ್ತು ಈ ಸದನದಲ್ಲಿ ಇರತಕ್ಕ ಎಲ್ಲರೂ ಸೇರಿ ಇದರ ಬಗ್ಗೆ ಒಂದು ವಿಚಾರ ಮಾಡಬೇಕು. ವಿಚಾರ ಮಾಡಿ ಆಗಿರತಕ್ಕ ಒಂದು ದೊಡ್ಡ ಪ್ರಮಾದವನ್ನು ತಪ್ಪಿಸಿ ನಾವು ಆ ವಿದ್ಯಾರ್ಥಿಗಳಿಗೆ ರಕ್ಷಣೆಯನ್ನು ಕೊಡಬೇಕಾಗಿದೆ. ಇವತ್ತು 1992ನೇ ಇಸವಿಯಲ್ಲಿ ಈ ಸೀಟಿಯನ್ನುಮಾಡಿದಾಗ ನಮ್ಮ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು. ಅಂದಿನ ದಿವಸದಲ್ಲಿ ಈ ಸೀಟಿಯನ್ನು ನಮ್ಮ ಹೈಕೋರ್ಟಿನ ಒಂದು ತೀರ್ಮಾನದ ಮೇಲೆ, ಒಂದು ಫೀಸನ್ನು ನೀವೇ ನಿಗದಿ ಮಾಡಬೇಕು. 100 ಸೀಟು ಇದ್ದರೆ ಯಾವ ರೀತಿ ವಿಭಾಗ ಮಾಡಬೇಕು ಎಂಬ ಪ್ರಶ್ನೆ ಬಂದಾಗ ಅವತ್ತು ಹಂಚಿದಾಗ ಬಹಳ ಲಾಬಿಗಳು ನಡೆದವು. ಈ ಲಾಬಿಗಳು ಅನೇಕ ಇದ್ದಾವೆ. ಇವತ್ತು ಮೆಡಿಕಲ್ ಲಾಬಿ ಇರಬಹುದು, ಶುಗರ್ ಲಾಬಿ ಇರಬಹುದು. ಅಥವಾ ಇನ್ನಿತರ ಅನೇಕ ಲಾಬಿಗಳು ಹೆದರಿಸುವುದಕ್ಕೆ ಬಂದರು. ಮೆಡಿಕಲ್ ಲಾಬಿಯವರಂತೂ ವೀರಪ್ಪ ಮೊಯಿಲಿಯವರಿಗೆ ತುಂಬಾ ಹೆದರಿಸಿದರು. ಏಕೆಂದರೆ ಒಂದು ಪ್ರಶ್ನೆ ಇಲ್ಲಿ ಬಂತು. ಇವತ್ತು ಈ ತಾಂತ್ರಿಕ ಶಾಲೆಗಳನ್ನು ನಡೆಸತಕ್ಕಂಥಹ ಬಹುತೇಕ ಮಂದಿ ನಿಮ್ಮ ಕಾಂಗ್ರೆಸ್‌ನಲ್ಲಿದ್ದಾರೆ ಎಂಬ ವಿಚಾರ ಬಂತು. ಆದರೆ ಇಲ್ಲಿ ಯಾವುದೇ ಪಕ್ಷದವರು ಇರಲಿ. ಇವರು ವ್ಯಾಪಾರಿಯ ಮನೋಭಾವನೆಯನ್ನು ಹೊಂದಿರತಕ್ಕ ಜನಗಳೇ ವಿನಹ, ಏನು ಸಾಮಾಜಿಕ ನ್ಯಾಯವನ್ನು ತರತಕ್ಕ ಜನಗಳಲ್ಲ. ಇದು ನಮ್ಮ ಸರ್ಕಾರವೇ ಇರಬಹುದು, ಮತ್ತೊಂದು ಸರ್ಕಾರವೇ ಇರಬಹುದು. ಯಾವುದೇ ಸರ್ಕಾರ ಇರಬಹುದು. ಎಲ್ಲಾ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿ ಇವರು ಅವರ ಕೆಲಸವನ್ನು ಮಾಡಿಸಿಕೊಳ್ಳುತಕ್ಕ ಒಂದು ವ್ಯಾಪಾರಿಯ ಮನೋಭಾವ ಇರತಕ್ಕಂಥಹ ಈ ಒಂದು ತಾಂತ್ರಿಕ ಕಾಲೇಜನ್ನುನಡೆಸತಕ್ಕಂಥಹ ಜನಗಳು ಆಗಿದ್ದಾರೆ. ಇವರ ಮೇಲೆ ನಾವು ಕಡಿವಾಣ ಹಾಕದೇ ನಾವು ಸಾಮಾಜಿಕ ನ್ಯಾಯವನ್ನು ಕೊಡುವುದಕ್ಕೆ ಆಗುವುದಿಲ್ಲ ಹಾಗೂ ನಮ್ಮ ಏನು ಬಡತನದಿಂದ ಬಂದಿರತಕ್ಕ ವಿದ್ಯಾರ್ಥಿಗಳು ಇದ್ದಾರೆ? ಹಿಂದುಳಿದ ವರ್ಗದಿಂದ ಬಂದಿರತಕ್ಕ ವಿದ್ಯಾರ್ಥಿಗಳು ಇದ್ದಾರೆ, ಏನು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದಿಂದ ಬಂದಿರತಕ್ಕಂಥಹ ಪ್ರತಿಭಾವಂತ ವಿದ್ಯಾರ್ಥಿಗಳು ಇದ್ದಾರೆ, ಇವರಿಗೆ ನಾವು ಅವಕಾಶವನ್ನು ಕಲ್ಪಿಸದ ರೀತಿಯಲ್ಲಿ ಆಗಿರುತ್ತದೆ. ಇವತ್ತಿನ ಸುಪ್ರೀಂ ಕೋರ್ಟ್ ತೀರ್ಮಾನವನ್ನು ನೋಡಿದರೆ ಏನು ಇದು ಅಂಗಡಿಯಲ್ಲಿಟ್ಟುಕೊಂಡು ಒಂದು ವಸ್ತುವನ್ನು ಹಾಕುತ್ತಿದ್ದಾರೇನೋ ಎನ್ನುವ ರೀತಿಯಲ್ಲಿ ಇವತ್ತು ಈ ಮೆಡಿಕಲ್ ಸೀಟ್ ಆಗಲೀ ಅಥವಾ ಇನ್ನಿತರ ಇಂಜನಿಯರಿಂಗ್ ಸೀಟ್ ಆಗಲೀ ಹಂಚತಕ್ಕ ವ್ಯವಸ್ಥೆ ಶುರುವಾಗಿದೆಯೇನೋ ಎನ್ನತಕ್ಕ ಭಾವನೆ ಬರತಕ್ಕ ಈ ಪತ್ರಿಕೆಗಳ ವಿಚಾರದಲ್ಲಿ ನಮಗೆ ತಿಳಿದು ಬರುತ್ತದೆ.

**5.10 ಪಿಎಂ**

ಮಾನ್ಯ ಹೈಯರ್ ಎಜ್ಯುಕೇಷನ್ ಸಚಿವರು ಅವರ ಹತ್ತಿರ ಏತಕ್ಕಾದರೂ ಚರ್ಚೆ ಮಾಡುತ್ತಾರೋ ಎಂದು ನನಗನ್ನಿಸುತ್ತದೆ. ಏಕೆಂದರೆ ಭಿಕ್ಷೆ ಬೇಡಿದ ರೀತಿಯಲ್ಲಿ ಆಗಿಬಿಡುತ್ತಾರೇನೋ ಎನ್ನುವ

ರೀತಿಯಲ್ಲಿ ಪತ್ರಿಕೆಗಳಲ್ಲಿ ಬರುತ್ತದೆ. ನನಗೆ 25 ಪರ್‌ಸೆಂಟ್, 15 ಪರಸೆಂಟ್ ಕೊಡಿ, ನನಗೆ ಕೊಡುವುದಕ್ಕೇ ಆಗುವುದಿಲ್ಲ ಎನ್ನುವ ರೀತಿಯಲ್ಲಿ ಮೆಡಿಕಲ್ ಕಾಲೇಜಿನವರಾಗಲಿ, ಇಂಜಿನಿಯರಿಂಗ್ ಕಾಲೇಜಿನವರಾಗಲಿ ಸರ್ಕಾರದ ಮೇಲೆ ಸವಾರಿ ಮಾಡತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಈ ಪರಿಸ್ಥಿತಿಯನ್ನು ಸರ್ಕಾರ ತಪ್ಪಿಸಬೇಕಾಗುತ್ತದೆ. ಸರ್ಕಾರ ಇದೆಯೆಂದು ತೋರಿಸಬೇಕಾಗುತ್ತದೆ. ಕಾರಣ, ಮೆಡಿಕಲ್ ಕಾಲೇಜುಗಳಾಗಲಿ, ತಾಂತ್ರಿಕ ಕಾಲೇಜುಗಳಾಗಲಿ ಒಂದು ದಿವಸದಲ್ಲಿ ಆಗಲಿಲ್ಲ. ತಾಂತ್ರಿಕ ಕಾಲೇಜುಗಳು ಪ್ರಾರಂಭವಾಗಬೇಕಾದರೆ ಸರ್ಕಾರದ ಅನುಮತಿ ತೆಗೆದುಕೊಂಡು, ಸರ್ಕಾರದ ಅನೇಕ ಸೌಲಭ್ಯಗಳನ್ನು ತೆಗೆದುಕೊಂಡು ಆಗಿದೆ. ಭೂಮಿ ತೆಗೆದುಕೊಂಡಿರುವುದು ಇರಬಹುದು, ಮೆಡಿಕಲ್ ಕೌನ್ಸಿಲಿಂಗ್ ಆಗುವುದಕ್ಕೂ ಮೊದಲು ರಾಜ್ಯ ಸರ್ಕಾರವೇ ಐವತ್ತು, ನೂರು, ನೂರೈವತ್ತು ಸೀಟನ್ನೋ ಕೊಡತಕ್ಕಂಥ ಅಧಿಕಾರವಿತ್ತು. ಇತ್ತೀಚೆಗೆ ಮೆಡಿಕಲ್ ಕೌನ್ಸಿಲ್‌ನವರಿಗೆ ಶಿಫಾರಸ್ಸು ಮಾಡಬೇಕಾಗುತ್ತದೆ, ಅವರು ಕೊಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಅಂದರೆ ಇವೆಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿರತಕ್ಕದ್ದು. ಮಾನ್ಯ ಸೋಮಶೇಖರ್ ರವರು ಹೇಳಿದಂತೆ ಅವರು ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ಉಪಯೋಗಿಸಿಕೊಂಡು ಅವರ ಕಾಲೇಜುಗಳನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಆ ರೀತಿ ಉಪಯೋಗಿಸಿಕೊಂಡಿರುವವರಿಗೆ ನಾವು ಯಾವುದಾದರೂ ಒಂದು ಕಾನೂನಿನ ರೀತಿಯಲ್ಲಿ ಅವರಿಗೆ ಕಡಿವಾಣವನ್ನು ಹಾಕದಿದ್ದರೆ ಆಗುವುದೇ ಇಲ್ಲ. ಅವರು ಪ್ಯಾರಾ ನಂಬರ್ 58, 68 ನ್ನು ಹೇಳಿದರು. ಇದರಲ್ಲಿ ನಮ್ಮ ಪರವಾಗಿದೆ, ಒಂದು ಆಡಳಿತ ಮಂಡಳಿಯ ಪರವಾಗಿದೆಯೆಂದು ಹೇಳಿದರು. ಸುಪ್ರೀಮ್ ಕೋರ್ಟಿನ ಈ ತೀರ್ಮಾನ ಗೊಂದಲವಾಗಿದೆಯೆಂದು ನಮ್ಮ ಹೈಯರ್ ಎಜ್ಯುಕೇಷನ್ ಸಚಿವರೇ, ಪರಿಶೀಲನೆ ಮಾಡತಕ್ಕವರೇ ಹೇಳಿದರು. ಈ ಗೊಂದಲಮಯವಾದ ತೀರ್ಮಾನದಲ್ಲಿ ನಮ್ಮ ಸರ್ಕಾರದ ಪರವಾಗಿ ಯಾವುದು ಅನುಕೂಲವಾಗುತ್ತದೋ ಆ ರೀತಿ ಗೊಂದಲಮಯವಾಗಿ ಮಾಡಿ ಯಾವುದೇ ರೀತಿಯಲ್ಲಿ ಆಡಳಿತ ಮಂಡಳಿಯವರು ನಮಗೆ ಐವತ್ತು ಪರ್‌ಸೆಂಟ್ ಸೀಟನ್ನು ಸಿ.ಇ.ಟಿ.ಗೆ. ಕೊಟ್ಟರೆ ಆಗಬಹುದು, ಇಲ್ಲದಿದ್ದರೆ ಅವರ ಮೇಲೆ ಕಡಿವಾಣವನ್ನು ಹಾಕತಕ್ಕ ವ್ಯವಸ್ಥೆಯನ್ನು ಮಾಡಬೇಕು. ಉನ್ನಿಕೃಷ್ಣನ್‌ರವರ ತೀರ್ಮಾನವಾದ ಮೇಲೆ, 11 ಜನ ಜಡ್ಜ್‌ಗಳು ಇರತಕ್ಕಂಥ ಫುಲ್ ಬೆಂಚ್ ಪೀಠದಲ್ಲಿ ತೀರ್ವಾನವಾಗಿದೆ. ಉನ್ನಿಕೃಷ್ಣನ್‌ರವರು ಕೊಟ್ಟಂಥ ತೀರ್ಮಾನವೂ ಸುಪ್ರೀಮ್ ಕೋರ್ಟ್‌ನ ತೀರ್ಮಾನ, 11 ಜನರ ಬೆಂಚ್‌ನವರು ಕೊಟ್ಟಂಥ ತೀರ್ಮಾನವೂ ಸುಪ್ರೀಮ್ ಕೋರ್ಟ್‌ನ ತೀರ್ಮಾನ. ಸುಪ್ರೀಮ್ ಕೋರ್ಟ್‌ನ ತೀರ್ಮಾನವನ್ನು ಸುಪ್ರೀಮ್ ಕೋರ್ಟ್ ಬದಲಾವಣೆ ಮಾಡುತ್ತದೆಂದರೆ ನಿಜವಾಗಲೂ ಅತ್ಯಂತ ವಿಷಾದ ಪಡತಕ್ಕದ್ದು. ಇದಕ್ಕಾಗಿ ಒಂದು ಇತಿಹಾಸವೇ ಇದೆ. ನಾವೆಲ್ಲರೂ ಒಗ್ಗಟ್ಟಾಗಿ ಸೇರಿ ಹೋರಾಟವನ್ನು ಏಕೆ ಮಾಡಬೇಕೆಂದು ಹೇಳಿದೆ ಎಂದರೆ, ಇದು ಖಾಸಗಿಯವರು ಕಾಲೇಜನ್ನು ಅವರೇ ಸ್ವತ: ನಡೆಸುವುದರಿಂದ ಯಾವುದೇ ವಿಧವಾದ ಇಟರ್‌ಫಿಯರೆನ್ಸ್‌ನ್ನು, ಹಕ್ಕುಗಳನ್ನು ಅವರ ಮೇಲೆ ಚಲಾವಣೆ ಮಾಡಲು ಆಗುವುದಿಲ್ಲ ಎಂಬ ಬರುವ ರೀತಿಯಲ್ಲಿ ತೀರ್ಮಾನವನ್ನು ಸುಪ್ರೀಮ್ ಕೋರ್ಟ್ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರಿದ್ದಾಗ, ಉಳುವವನೇ ಭೂಮಿಯ ಒಡೆಯ ಎಂದು ಮಾಡಬೇಕಾಗಿದ್ದರೆ, ಸಂವಿಧಾನವನ್ನೇ ತಿದ್ದುಪಡಿ ಮಾಡಿ ಆವತ್ತಿನ ದಿವಸ ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡಿ, ಇವತ್ತು ಯಾರು ಶ್ರೀಮಂತರಿದ್ದರು, ಭೂ ಮಾಲೀಕರಿದ್ದರೋ ಅವರಿಂದ

ಭೂಮಿಯನ್ನು ತೆಗೆದು ಗೇಣಿಯನ್ನೇನು ಮಾಡುತ್ತಿದ್ದರೋ ಅವರಿಗೆ ಕೊಡತಕ್ಕಂಥ ಕಾನೂನನ್ನು ಮಾಡಿ ಆವತ್ತಿನ ದಿವಸ ಕೊಟ್ಟಿದ್ದೇವೆ. ಅಂಥ ಕಾನೂನನ್ನೂ ಮಾಡಿರುವಾಗ, ಇಡೀ ರಾಷ್ಟ್ರದ ವ್ಯಾಪ್ತಿಗೆ ಈ ತೀರ್ಮಾನ ಒಳಗಾಗಿರುವಾಗ, ಈಗಾಗಲೇ ಕೇರಳ ರಾಜ್ಯದ ಮುಖ್ಯಮಂತ್ರಿಗಳು ಈ ತೀರ್ಮಾನ ಸಮರ್ಪಕವಾಗಿಲ್ಲವೆಂದು ಅಪೀಲು ಹೋಗಿರತಕ್ಕದ್ದು ಇದೆ. ಆದ್ದರಿಂದ ಎಲ್ಲಾ ರಾಜ್ಯಗಳು ಸೇರಿ, ಇಲ್ಲಿ ನಮ್ಮ ವಿರೋಧ ಪಕ್ಷದ ನಾಯಕರೂ, ಮುಖಂಡರೂ, ಎಲ್ಲಾ ಪಕ್ಷದವರೂ ಇದ್ದಾರೆ, ಇದು ಎಲ್ಲಾ ಪಕ್ಷದ ಪ್ರಶ್ನೆಯಾಗಿರುವುದರಿಂದ, ನ್ಯಾಯದಿಂದೇನು ವಂಚಿತರಾಗಿದ್ದಾರೆ ಅವರಿಗೆ ನ್ಯಾಯ ಸಿಕ್ಕಬೇಕಾಗಿರುವುದರಿಂದ, ರಾಜ್ಯಾಂಗವನ್ನು ತಿದ್ದುಪಡಿ ಮಾಡಲು ಅವಕಾಶ ಇದ್ದರೆ ಅದನ್ನೂ ಸಹ ತಿದ್ದುಪಡಿ ಮಾಡಲು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಸರ್ವ ಪಕ್ಷಗಳ ನಿಯೋಗವನ್ನು ಪ್ರಧಾನ ಮಂತ್ರಿಗಳ ಬಳಿಗೆ ತೆಗೆದುಕೊಂಡು ಹೋಗಿ ಇದಕ್ಕೆ ಏನಾದರೂ ಕಡಿವಾಣವನ್ನು ಹಾಕದಿದ್ದರೆ ನಿಜಕ್ಕೂ ಇದರಂಥ ಅನ್ಯಾಯ ಯಾವುದೂ ಆಗುವುದಿಲ್ಲ. ಇದರಿಂದ ಮತ್ತೊಮ್ಮೆ ಏನು ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ, ವರ್ಗದವರು, ಪ್ರತಿಭಾವಂತ ವಿದ್ಯಾರ್ಥಿಗಳೇನಿದ್ದಾರೋ ಅವರ ಮೇಲೆ ಗದಾ ಪ್ರಹಾರಮಾಡಿದಂತಾಗುತ್ತದೆ. ಇದು ಅತ್ಯಂತ ತೊಂದರೆಯಾಗತಕ್ಕ ತೀರ್ಮಾನವಾಗಿರುವುದರಿಂದ ಇದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ಹೈಯರ್ ಎಜ್ಯುಕೇಷನ್ ಸಚಿವರು ತಾಂತ್ರಿಕ ಕಾಲೇಜನ್ನು ನಡೆಸತಕ್ಕವರಲ್ಲಿ ಒಬ್ಬರಾಗಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿಯವರೂ ಆಗಿದ್ದಾರೆ. ಅವರಿಗೆ ಮಂತ್ರಿ ಪದವಿ ಇವತ್ತು ಇರಬಹುದು, ನಾಳೆ ಹೋಗಬಹುದು, ಆದರೆ ಶಾಶ್ವತವಾದ ಕಾನೂನನ್ನು ಮಾಡಿ ಹೋಗಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಮಕ್ಕಳು, ಮುಂದೆ ಬರತಕ್ಕಂಥ ಪೀಳಿಗೆ ನಮ್ಮೆಲ್ಲರಿಗೂ ಶಾಪವನ್ನು ಹಾಕತಕ್ಕ ಪರಿಸ್ಥಿತಿ ಬಂದರೂ ಬರಬಹುದು. ಸರಿಯಾದ ಕಾನೂನನ್ನು ಈ ಸದನದಲ್ಲಿ ಮಾಡಲಿಲ್ಲ, ಅಥವಾ ಇವರೆಲ್ಲರೂ ಸೇರಿ ಯಾವ ರೀತಿಯಲ್ಲಿ ನ್ಯಾಯವನ್ನು ದೊರಕಿಸಿಕೊಡಬೇಕಾಗಿತ್ತೋ ಅದನ್ನು ಕೊಡಲಿಲ್ಲ ಎಂದು ಪ್ರತಿಭಾವಂತ ವಿದ್ಯಾರ್ಥಿಗಳು, ಬಡ ವಿದ್ಯಾರ್ಥಿಗಳು ನಾಳೆ ದಿವಸ ಹೇಳತಕ್ಕ ಪ್ರಮೇಯ ಬರಬಹುದು. ಇದರಲ್ಲಿ ಹೆಚ್ಚಿನ ಭಾಗ, ಏಕೆಂದರೆನೂರಕ್ಕೆ 23 ಪರ್‌ಸೆಂಟ್ ಇರತಕ್ಕಂಥ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಅತ್ಯಂತ ಅನ್ಯಾಯವಾಗುವುದರಿಂದ ಇದಕ್ಕೆ ಯಾವ ರೀತಿಯಲ್ಲಿ ಕಡಿವಾಣವನ್ನು ಹಾಕಬೇಕೋ ಅದನ್ನು ಮಾನ್ಯ ಸಚಿವರು ಹಾಕಬೇಕು. ತಾಂತ್ರಿಕ ಕಾಲೇಜುಗಳನ್ನೇನು ಖಾಸಗಿಯವರು ನಡೆಸುತ್ತಾರೆ ಅವರ ಹತ್ತಿರ ಯಾವುದೇ ಕಾರಣಕ್ಕೆ ತಾವು ಭಿಕ್ಷೆ ಬೇಡುವ ಪರಿಸ್ಥಿತಿಗೆ ಹೋಗಬಾರದು. ಇದು ಕೇವಲ ಅವರು ಕಾಲೇಜುಗಳನ್ನು ನಡೆದತಕ್ಕದ್ದು, ತಾಂತ್ರಿಕ ವಿದ್ಯಾರ್ಥಿಗಳನ್ನು ರೂಪುಗೊಳಿಸತಕ್ಕದ್ದು ಇವೆರಡೇ ಪ್ರಶ್ನೆಗಳ ಮೇಲೆ ನಿಂತಿಲ್ಲ. ಆ ತಾಂತ್ರಿಕ ಕಾಲೇಜಿನಿಂದ ಬಂದಂಥ ವಿದ್ಯಾರ್ಥಿಗಳು ಇವತ್ತು ನಮ್ಮ ದೇಶವನ್ನು ನಿರ್ಮಾಣ ಮಾಡತಕ್ಕಂಥ ಅತ್ಯುತ್ತಮವಾದ ಪ್ರತಿಭಾವಂತ ವಿದ್ಯಾರ್ಥಿಗಳಾಗಿ ಬರಬೇಕಾಗಿದೆ. ಡಾಕ್ಟರ್ ಆಗಿ ಬರತಕ್ಕವರು ನಮ್ಮ ಪ್ರಾಣವನ್ನು ಉಳಿಸತಕ್ಕಂಥ ಅತ್ಯುತ್ತಮ ಪ್ರತಿಭಾವಂತ ವಿದ್ಯಾರ್ಥಿಗಳಾಗಿ ಹೊರಕ್ಕೆ ಬರಬೇಕಾಗಿದೆ. ಆದರೆ ಇವತ್ತು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ರೀತಿಯಲ್ಲಿ ಸೀಟನ್ನು ಮಾಡಲು ಹೊರಟರೆ ನಮ್ಮ ಪ್ರಾಣವನ್ನು ತೆಗೆಯತಕ್ಕಂಥ ಡಾಕ್ಟರ್‌ಗಳು ಬರಬಹುದು, ನಮ್ಮ ಸೌಧಗಳನ್ನು ಬಿದ್ದುಹೋಗುವಂತೆ ಕಟ್ಟತಕ್ಕ ಇಂಜಿನಿಯರ್‌ಗಳು ಬರಬಹುದು. ಇಂಥದರ ಮೇಲೆನಾವು ಕಡಿವಾಣವನ್ನು ಹಾಕದಿದ್ದರೆ

ನಾವು ಯಾವ ರೀತಿ ದೇಶವನ್ನು ನಿರ್ಮಾಣ ಮಾಡುವುದಕ್ಕಾಗುತ್ತದೆ. ಅದಕ್ಕಾಗಿ ನಾವು ಆ ಕಾನೂನಿನಲ್ಲಿ ಆ ಅವಕಾಶವನ್ನು ಮಾಡಬೇಕಾಗುತ್ತದೆ. ಖಾಸಗಿಯವರು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ ಈಗಾಗಲೇ ಪತ್ರಿಕೆಗಳಲ್ಲಿ ಪ್ರಚಾರ ಕೊಟ್ಟಿದ್ದಾರೆಂದು ತೋರಿಸಿದರು. ಅದಕ್ಕೆ ಏನಾದರೂ ಒಂದು ನಿಯಮವನ್ನು ಹಾಕಬೇಕಾಗುತ್ತದೆ. ಹೊರ ರಾಜ್ಯದಿಂದ ಬರತಕ್ಕವರಿಗೆ, ಹೊರ ರಾಷ್ಟ್ರಗಳಿಂದ ಓದಲು ಬರುತ್ತಿದ್ದವರಿಗೆ ನಮ್ಮ ರಾಜ್ಯಕ್ಕೆ ಇಷ್ಟೊಂದು ಟ್ಯಾಕ್ಸ್‌ನ್ನು ಕೊಟ್ಟುಬರಬೇಕು, ಇಲ್ಲದಿದ್ದರೆ ಅಡ್ಮಿಷನ್ ಮಾಡಿಕೊಳ್ಳಲು ಬರುವುದಿಲ್ಲವೆಂದರೆ ಆಗ ಅವರು ಬರುವುದೇ ತಪ್ಪಿಹೋಗುತ್ತದೆ. ಆ ರೀತಿ ಯಾವುದಾದರೊಂದು ಕಡಿವಾಣವನ್ನುಹಾಕಿ ಈ ಜನಗಳಿಗೆ ರಕ್ಷಣೆ ನೀಡಬೇಕು, ಈ ಸದನ ಕೇವಲ ವಿರೋಧ ಪಕ್ಷದವರ ವಿಚಾರ, ಆಡಳಿತ ಪಕ್ಷದವರು ತಪ್ಪು ಮಾಡುತ್ತದೆ ಎಂದು ಹೇಳುವುದರ ಬದಲಾಗಿ ನಾವೆಲ್ಲರೂ ಸೇರಿ ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯೋಣ. ಇದರ ಬಗ್ಗೆ ಹೋರಾಟ ಮಾಡಿ ಮುಂದಿನ ಪೀಳಿಗೆಯ ಶಾಪಕ್ಕೆ ನಾವು ಒಳಗಾಗದೆಯೇ ಏನಾದರೂ ಸಹಾಯ ಮಾಡತಕ್ಕದನ್ನು ಮಾಡೋಣ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ತಾವು ನನಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಒಂದು ರೀತಿಯ, ನಾನು ಅದಕ್ಕೆ ಯಾವ ರೀತಿಯಾಗಿ ಹೇಳಬೇಕೆಂದು ಗೊತ್ತಾಗುತ್ತಿಲ್ಲ. ನಾರ್ಮಲ್ ಆಗಿ ಒಳ್ಳೆಯ ಕೆಲಸವನ್ನು ಮಾಡಿದರೆ ಸುವರ್ಣಾಕ್ಷರದಲ್ಲಿ ಬರೆಯುವುದೆಂದು ಹೇಳುತ್ತಾರೆ. ಆದರೆ ಈ ಸಂದರ್ಭದಲ್ಲಿ ಇದರ ಬಗ್ಗೆ ಯಾವ ರೀತಿ ವಿವರಿಸಬೇಕೋ ಎಂದು ನನಗೆ ಗೊತ್ತಾಗುತ್ತಿಲ್ಲ. ಅಂತಹ ಸಂಗತಿ ಇವತ್ತು ನಮ್ಮ ಮುಂದೆ ಬಂದಿದೆ. ಇಡೀ ಶಿಕ್ಷಣ ಕ್ಷೇತ್ರ ಪ್ರಪಂಚದಾದ್ಯಂತ ಬದಲಾವಣೆಯಾಗುತ್ತಿರುವ ಸಂದರ್ಭದಲ್ಲಿ ನಮ್ಮ ರಾಷ್ಟ್ರದಲ್ಲಿ ಶಿಕ್ಷಣವನ್ನು ಬಹಳ ಉತ್ತಮವಾಗಿ ಕೊಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ರಾಷ್ಟ್ರದ ಮತ್ತು ರಾಜ್ಯದ ಸರ್ಕಾರಗಳು ತೆಗೆದುಕೊಳ್ಳುತ್ತಿರತಕ್ಕ ಸಂದರ್ಭದಲ್ಲಿ ಒಂದು ರೀತಿಯ ಗುಣಮಟ್ಟದ ಶಿಕ್ಷಣವನ್ನು ನಮ್ಮ ರಾಷ್ಟ್ರದಲ್ಲಿ ಕೊಟ್ಟು ರಾಷ್ಟ್ರದ ಮತ್ತು ಅಂತರ್ ರಾಷ್ಟ್ರದ ಮಟ್ಟಕ್ಕೆ ನಮ್ಮ ಪದವೀಧರರನ್ನು ಕಳುಹಿಸತಕ್ಕಂಥ ಈ ಸಂದರ್ಭದಲ್ಲಿ ಒಂದು ರೀತಿಯ ಸಾಮಾಜಿಕ ಬದಲಾವಣೆಯಾಗುವುದರ ಜೊತೆಗೆ ಶಿಕ್ಷಣವು ಆರ್ಥಿಕ ವ್ಯವಸ್ಥೆಗೂ ನಮ್ಮ ರಾಷ್ಟ್ರದಲ್ಲಿ ಹೊಸ ಆಯಾಮವನ್ನು ತರತಕ್ಕಂಥ ಈ ಸಂದರ್ಭದಲ್ಲಿ ವೃತ್ತಿ ಶಿಕ್ಷಣ ಇವತ್ತಿನ ದಿವಸ ಒಂದು ರೀತಿಯಲ್ಲಿ ಗೊಂದಲಕ್ಕೆ ಸಿಕ್ಕಿರತಕ್ಕದ್ದು. 31.10.2002 ರಂದು ಏನು ಸುಪ್ರೀಮ್ ಕೋರ್ಟ್‌ನ ತೀರ್ಪು ಬಂದಿದೆ, ಅದರ ಹಿನ್ನೆಲೆಯಲ್ಲಿ ಇಡೀ ರಾಷ್ಟ್ರದಲ್ಲಿ ಇವತ್ತು ವೃತ್ತಿ ಶಿಕ್ಷಣ ಗೊಂದಲಕ್ಕೆ ಸಿಕ್ಕಿದೆ ಎಂದು ಮಾತನ್ನು ಬಹಳ ವಿಷಾಧದಿಂದ ಹೇಳಬೇಕಾಗುತ್ತದೆ. ಸುಮಾರು 13 ಜನ ಗೌರವಾನ್ವಿತ ಸದಸ್ಯರುಗಳು ಇದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸುರೇಶ್‌ಕುಮಾರ್‌ರವರು, ಮಾನ್ಯ ಬೈರೇ ಗೌಡರು, ಮಾನ್ಯ ಸೋಮಶೇಖರ್‌ರವರು, ಮಾನ್ಯ ಜಗದೀಶ್ ಶೆಟ್ಟರ್, ವಿರೋಧ ಪಕ್ಷದ ನಾಯಕರು, ಮಾನ್ಯ ಚೆನ್ನಿಗಪ್ಪನವರು, ಮಾನ್ಯ ಜಯಪ್ರಕಾಶ್ ಹೆಗಡೆಯವರು, ಮಾನ್ಯ ರಾಮದಾಸ್‌ರವರು ಮಾನ್ಯ ಸುಬ್ಬಾರೆಡ್ಡಿಯವರು, ಮಾನ್ಯ ಸಿಂಧ್ಯಾರವರು, ಮಾನ್ಯ ವಿಶ್ವೇಶ್ವರ ಹೆಗಡೆ, ಮಾನ್ಯ ಹಂಪನಗೌಡರು, ಮಾನ್ಯ ಕರಡಿ ಸಂಗಣ್ಣನವರು ಮತ್ತು ಮಾನ್ಯ ಕರಿಯಣ್ಣನವರು, ಇಷ್ಟೂ ಜನ ಮಾತನಾಡಿರತಕ್ಕಂಥ ಪ್ರತಿಯೊಂದರಲ್ಲೂ ಅರ್ಥವಿದೆ. ನಾನು ಸುಪ್ರೀಮ್

ಕೋರ್ಟ್‌ನ ತೀರ್ಪಿನ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಏಕೆಂದರೆ ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಆದ್ದರಿಂದ ಸಮಯವನ್ನು ಕಳೆಯಲು ನಾನು ಇಷ್ಟಪಡುವುದಿಲ್ಲ. ಎಲ್ಲಿ ಅವಶ್ಯಕತೆ ಇದೆ ಆಗ ಅದನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವರು ಬಹಳ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಇದನ್ನು ಮಾಡಿದರೆ ನಮ್ಮ ರಾಜ್ಯದ, ರಾಷ್ಟ್ರದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ಸಂದರ್ಭದಲ್ಲಿ ಸರ್ಕಾರ 'ಏನೂ ಮಾಡಲಿಲ್ಲ, 31.10.2002 ರಂದು ತೀರ್ಪು ಬಂದಮೇಲೆ ರಾಜ್ಯ ಸರ್ಕಾರ ಏನನ್ನೂ ಮಾಡಲಿಲ್ಲ ಎಂಬ ಮಾತನ್ನು ಒಟ್ಟಾರೆ ಮಾತನಾಡಿದಂಥ ಎಲ್ಲರೂ ಅಭಿಪ್ರಾಯ ಪಟ್ಟಿದ್ದರೆ. ಇದು ಸ್ವಾಭಾವಿಕ. ಅವರು ಹೇಳಿದ್ದು ತಪ್ಪು ಎನ್ನುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಅಂಥ ಒಂದು ಸಂದರ್ಭ ಇವತ್ತು ಬಂದಿದೆ. ಆ ಹಿನ್ನೆಲೆಯಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ಕೂಡ ಮಾಡಿಕೊಂಡೇ ಬಂದಿದೆ. ನಾಲ್ಕು ತಿಂಗಳ ಅವಧಿಯಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಸುಪ್ರೀಮ್ ಕೋರ್ಟಿನ ತೀರ್ಪಿನ ಚೌಕಟ್ಟಿ ನೊಳಗೆ ಏನು ಮಾಡಬಹುದು, ಚೌಕಟ್ಟನ್ನು ಬಿಟ್ಟು ಹೊರತಾಗಿ ನಾವು ನಮ್ಮ ರಾಜ್ಯ ಸರ್ಕಾರದ ಚೌಕಟ್ಟಿನೊಳಗೆ ಏನು ಮಾಡಬಹುದು ಎಂಬ ಬಗ್ಗೆ ಅನೇಕ ಸಂದರ್ಭಗಳಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಸುರೇಶ್‌ಕುಮಾರ್‌ರವರಿಗೆ ಮತ್ತು ಎಲ್ಲಾ ಸದಸ್ಯರಿಗೆ ತಿಳಿಸಲು ಇಷ್ಟಪಡುವುದೇನೆಂದರೆ, ಮೆನೇಜ್‌ಮೆಂಟ್‌ನವರ ಜೊತೆ ತಾವು ಕರೆದು ಮಾತನಾಡಿದ್ದೀರಿ ಎಂದರು. ಅದಕ್ಕೂ ಮೊದಲು, ಅಂದರೆ 31ನೇ ತಾರೀಖು ತೀರ್ಪು ಬಂದಿದೆ, 27 ನೇ ತಾರೀಖು ನಾನು ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೆ. ಆ ಸಮಿತಿಗೆ ಯಾವ ರೀತಿಯಲ್ಲಿ ಅಡ್ಮಿಷನ್ಸ್ ಮಾಡಲು ಸರ್ಕಾರಕ್ಕೆ ಅವಕಾಶ ಇತರಕ್ಕದ್ದು ಮತ್ತು ಫೀ ಸ್ಟಕ್ಚರ್‌ನ್ನು ಹೊಸದಾಗಿ ನಿಗಿದಿ ಮಾಡಲು ಸರ್ಕಾರಕ್ಕೆ ಏನೇನು ಅವಕಾಶಗಳು ಇದೆ ಇದನ್ನು ನೋಡಬೇಕೆಂದು ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಕೊಟ್ಟಿವು. ಈ ಮಧ್ಯ ಕೇರಳ ಸರ್ಕಾರದವರು ನಾಲ್ಕೈದು ದಿವಸಗಳಲ್ಲೇ ಒಂದು ಆರ್ಡರ್‌ನ್ನು ಹೊರಡಿಸಿದರು. ಆ ಆರ್ಡರ್ ಹೊರಗಡೆಗೆ ಬಿದ್ದ ತಕ್ಷಣ ಒಂದು ವಾರದೊಳಗೆ ಕೇರಳದ ಹೈಕೋರ್ಟ್‌ನಲ್ಲಿ ಅದಕ್ಕೆ ಸ್ಟೇ ಸಿಕ್ಕಿತು. ಇದು ನಮಗೆ ಗೊತ್ತಾದ ತಕ್ಷಣವೇ, ನಾವು ಏನಾದರೂ ಆರ್ಡರ್‌ನ್ನು ಹೊರಡಿಸಿದರೆ ನಮಗೂ ಇದೇ ಗತಿಯಾಗುತ್ತದೆ, ನಮ್ಮ ರಾಜ್ಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕೆಲಸವನ್ನು ನಾವು ಮಾಡಿ ಹೌದು ನಾವು ಕೋರ್ಟ್‌ಗೆ ಹೋಗಿದ್ದೆವು, ಕೋರ್ಟ್‌ಗೆ ಹೋದ ತಕ್ಷಣ ಮನಗೆ ಸ್ಟೇ ಸಿಕ್ಕದೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎನ್ನುವಂಥ ಅಸಹಾಯಕತೆಯನ್ನು ತೋರಿಸಬಾರದು ಎಂಬ ಉದ್ದೇಶದಿಂದ ನಾವು ಆ ರೀತಿ ತೀರ್ಮಾನವನ್ನು ಮಾಡಲಿಲ್ಲ. ಅವಸರದ ತೀರ್ಮಾನವನ್ನು ನಾವು ಮಾಡಲು ಹೋಗಲಿಲ್ಲ. ಆದರ ಮೇಲಾಗಿ ನಾವು ಅಡಿಷನಲ್ ಚೀಫ್ ಸೆಕ್ರೆಟರಿಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಅವರಿಗೆ ಒಂದು ಟರ್ಮ್ಸ್ ಅಂಡ್ ರೆಫರೆನ್ಸ್‌ನ್ನು ಕೊಟ್ಟೆವು. ನಾವು ಒಬ್ಬರೇ ಮಾಡಿದ್ದೇವೆ ಎಂಬ ಮಾತನ್ನು ಹೇಳುವುದಿಲ್ಲ. ಎಲ್ಲಾ ರಾಜ್ಯ ಸರ್ಕಾರಗಳೂ ಆಯಾಯ ರಾಜ್ಯಗಳಲ್ಲಿರುವ ಖಾಸಗಿ ಸಂಸ್ಥೆಯವರನ್ನು ಕರೆದು ಮಾತನಾಡಿದ್ದಾರೆ. ಕೇರಳಾದವರೂ ಸಹ ಕರೆದು ಮಾತನಾಡಿದ್ದಾರೆ. ಮೊದಲು ಅಲ್ಲಿ ಮಾತಿಗೆ ಬಂದರು ಆದರೆ ಸರ್ಕಾರದ ಆದೇಶವಾದಮೇಲೆ

ನಾವು ಬರುವುದಿಲ್ಲವೆಂದು ಹೇಳಿದರು. ಆಂಧ್ರ ಪ್ರದೇಶ, ತಮಿಳುನಾಡಿನಲ್ಲಿ ಕರೆದು ಮಾತನಾಡಿದ್ದಾರೆ. ಎಲ್ಲಾ ರಾಜ್ಯಗಳಲ್ಲೂ ಖಾಸಗಿ ಸಂಸ್ಥೆಯವರನ್ನು ಕರೆದು ಏನು ನಿಮ್ಮ ಅಭಿಪ್ರಾಯವೆಂದು ಕರೆದು ಮಾತನಾಡಿದ್ದಾರೆ. ನಾವು ಅವರನ್ನು ಕರೆದು ಮಾತನಾಡಿದ ಉದ್ದೇಶವೇನೆಂದರೆ, ನೀವು ಪರ್ಸೆಂಟೇಜ್ ಎಷ್ಟು ಕೊಡುತ್ತೀರಿ? ತಾವು ಎಷ್ಟು ಫೀ ತೆಗೆದುಕೊಳ್ಳುತ್ತೀರಿವಾದ ಅಷ್ಟು ಮಾತ್ರ ಕೇಳಲು ಕರೆಯಲಿಲ್ಲ, ಸುಪ್ರೀಮ್ ಕೋರ್ಟ್‌ನ ತೀರ್ಪಿನ ಹಿನ್ನೆಲೆಯಲ್ಲಿ ನಿಮ್ಮ ಅಭಿಪ್ರಾಯವೇನು, ಒಟ್ಟಾರೆ ಖಾಸಗಿ ಸಂಸ್ಥೆಯವರು ಶಿಕ್ಷಣ ಕ್ಷೇತ್ರದಲ್ಲಿ ಏನು ತೀರ್ಮಾನ ಮಾಡಬಹುದು ಎಂಬ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡುವುದಕ್ಕೆ ಆ ಸಭೆ ಮಾಡಿದೆವು. ಅದರಲ್ಲೂ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಕಾನೂನು ಸಚಿವರು, ವೈದ್ಯಕೀಯ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಇದ್ದಂಥ ಸಂದರ್ಭದಲ್ಲಿ ನಾವು ಮಾತನಾಡಿದ್ದೇವೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅಭಿಪ್ರಾಯಗಳನ್ನೂ ಹೇಳಿದ್ದಾರೆ. ಅನಂತರ ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದಲ್ಲ ಎರಡಲ್ಲ ಆರು ಸಭೆಗಳನ್ನು ಮಾಡಿದ್ದಾರೆ. ಅವರು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಶಿಫಾರಸ್ಸುಗಳನ್ನೂ ಸಹ ನಾವು ತೆಗೆದುಕೊಂಡಿದ್ದೇವೆ. ಅನಂತರ ಮ್ಯಾನೇಜ್‌ಮೆಂಟ್‌ನವರು ಹೇಳಿದ ಕೆಲವು ಸಲಹೆಗಳನ್ನೂ ತೆಗೆದುಕೊಂಡಿದ್ದೇವೆ. ಹೊರರಾಜ್ಯದಲ್ಲಿ ಯಾವ್ಯಾವ ರಾಜ್ಯಗಳಲ್ಲಿ ಏನೇನು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಬಹಳ ಸೂಕ್ಷ್ಮವಾಗಿ ಗಮನಹರಿಸಿದ್ದೇವೆ. ಏಕೆಂದರೆ, ಸುಪ್ರೀಮ್ ಕೋರ್ಟ್‌ನ ತೀರ್ಪಿದೆ, ನಾವೇನಾದರೂ ಮಾಡಲು ಹೋದರೆ ಮತ್ತೊಂದು ಸಾರಿ ಇದು ಸ್ಟೇಲ್‌ಮೆಟ್ ಆಗಬಾರದು ಎಂಬ ಕಾರಣಕ್ಕಾಗಿ ನಾವು ಬೇರೆ ಬೇರೆ ರಾಜ್ಯದವರೇನು ಮಾಡುತ್ತಿದ್ದಾರೆಂದು ಕಾಯುತ್ತಿದ್ದೇವೆ. ಯಾವರಾಜ್ಯದಲ್ಲೂ ಸಹ ಇದುವರೆಗೆ ಯಾವುದೇ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ ಸಮರ್ಪಕವಾಗಿ, ಹೌದು ತೀರ್ಮಾನ ಹೀಗಿದೆ, ಕಾಮನ್ ಎಂಟ್ರೆನ್ಸ್ ಟೆಸ್ಟ್ ಮಾಡಬಹುದು, ಅಥವಾ ಬೇರೆ ರೂಪದಲ್ಲಿ ಅಡ್ಮಿಷನ್ಸ್ ಮಾಡಬಹುದು, ಇಷ್ಟೇ ಫೀ ಸ್ಟ್ರಕ್ಚರ್ ಎನ್ನತಕ್ಕದ್ದನ್ನು ಯಾವ ರಾಜ್ಯದಲ್ಲೂ ಇವತ್ತಿನವರೆಗೆ ಎಲ್ಲೂ ಕೂಡ ಬಂದಿಲ್ಲ. ಇವತ್ತು ನಾವು ಏನು ಮಾಡಿದ್ದೇವೆಂದರೆ, ಏತಕ್ಕೆ ಸಿ.ಇ.ಟಿ. ಮಾಡಿದಿರಿ? ಸಿ.ಇ.ಟಿ. ಮಾಡಿದ ಉದ್ದೇಶವೇನೆಂದರೆ ಎಲ್ಲೋ ಒಂದು ಕಡೆನಮಗೆ ಹೋಪ್. ಮಾನ್ಯ ಸುರೇಶ್‌ಕುಮಾರ್‌ರವರು Let us Hope ಎನ್ನತಕ್ಕ ಮಾತನ್ನು ಹೇಳಿದರು. ಹೋಪ್ ಮಾಡುವುದರಲ್ಲಿ ಕ್ರಿಮಿನಲ್ ಅಂಶವಿಲ್ಲವೆನ್ನತಕ್ಕ ಮಾತನ್ನು ಹೇಳಿದಿರಿ. ಆ ರೀತಿ ಜನರಲ್ ಹೋಪ್‌ನ್ನು ಇಟ್ಟುಕೊಂಡು ನಾವು ಸಿ.ಇ.ಟಿ. ಮಾಡಲು ಮುಂದೆ ಹೋದೆವು. ಏಕೆಂದರೆ ಸಮಯ ಕಳೆಯಲು ನಮಗೆ ಇಷ್ಟವಿಲ್ಲ. ಸಮಯ ಕಳೆದು, ಅದು ಆದಮೇಲೆ ಇಡೀ ರಾಷ್ಟ್ರದ, ನಮ್ಮ ರಾಜ್ಯದ ವಿದ್ಯಾರ್ಥಿಗಳು ಮತ್ತೊಂದು ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ ಎಂಬುದು ಒಂದನೆಯದು, ಎರಡನೆಯದು, ಸರ್ಕಾರಿ ಕಾಲೇಜುಗಳಿಗೆ, 16 ಇಂಜಿನಿಯರಿಂಗ್ ಕಾಲೇಜು, 4 ಮೆಡಿಕಲ್ ಕಾಲೇಜು, 1 ಡೆಂಟಲ್ ಕಾಲೇಜು ಇದಿಷ್ಟೂ ಸರ್ಕಾರದ ಚೌಕಟ್ಟಿನಲ್ಲಿ ಬರುತ್ತದೆ. ಇಷ್ಟಕ್ಕಾದರೂ ನಾವು ಮಾಡಲೇ ಬೇಕಲ್ಲಾ? ನಾವು ನಿಲ್ಲಿಸುವಂತಿಲ್ಲ. ಸುಮಾರು ಹತ್ತು ಸಾವಿರ ಇಂಜಿನಿಯರಿಂಗ್ ಸೀಟು, ಸುಮಾರು 450 ಮೆಡಿಕಲ್ ಸೀಟು, ಸುಮಾರು 60 ಸೀಟು ಡೆಂಟಲ್‌ನಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಬರುತ್ತದೆ. ಹೋಮಿಯೋಪತಿ, ಬಿ.ಎಡ್. ಇವೆಲ್ಲಾ ಕೂಡ ಬರತಕ್ಕದ್ದು. ಆದ್ದರಿಂದ ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲವೆಂದು ಒಂದು ಕ್ಯಾಲೆಂಡರ್‌ನ್ನು ಹಾಕಿ ಅದನ್ನು

ಹೊರಗೆ ಹಾಕಿದ್ದೇವೆ. ಯಾವತ್ತು ಪರೀಕ್ಷೆ ಮಾಡುತ್ತೇವೆ, ಫಲಿತಾಂಶವನ್ನು ಯಾವತ್ತು ಅನೌನ್ಸ್ ಮಾಡುತ್ತೇವೆ, ಯಾವತ್ತು ಅಡ್ಮಿಷನ್ಸ್ ಮಾಡುತ್ತೇವೆ ಇವೆಲ್ಲವನ್ನೂ ನಾವು ಈಗಾಗಲೇ ಹೇಳಿಬಿಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ಸದನದ ಗಮನಕ್ಕೆ ತರತಕ್ಕದ್ದೇನೆಂದರೆ, ಕಳೆದ ವರ್ಷ ಸುಮಾರು 2398 ಸೀಟು ಮೆಡಿಕಲ್‌ನಲ್ಲಿ, ಸುಮಾರು 1612 ಸೀಟು ಡೆಂಟಲ್ ಸೀಟು, ಸುಮಾರು 31,113 ಇಂಜಿನಿಯರಿಂಗ್ ಸೀಟು ಇಷ್ಟೂ ಸೀಟುಗಳನ್ನು ನಾವು ಸಿ.ಇ.ಟಿ.ಯ ಮೂಲಕ ಹಂಚಿದ್ದೇವೆ. ಸೀಟುಗಳನ್ನು ಯಾವ ರೀತಿಯಲ್ಲಿ ಹಂಚಿದ್ದೇವೆ ಎನ್ನತಕ್ಕದ್ದು, 1996ರಲ್ಲಿ ಸಿ.ಇ.ಟಿ. ಆದಮೇಲೆ ಅಲ್ಲಿಂದ ಇಲ್ಲಿಯವರೆಗೆ ಸೀಟುಗಳನ್ನು ಯಾವ ರೀತಿಯಲ್ಲಿ ಹಂಚಿಕೊಂಡು ಬಂದಿದ್ದೇವೆ ಎಂಬ ಮಾಹಿತಿ ಇದೆ. ರಿಸರ್ವ್ಡ್ ಕ್ಯಾಟೆಗೇರಿ 15 ಪರ್ಸೆಂಟ್, ಸಂವಿಧಾನದ ರಿಸರ್ವೇಷನ್ ಇದೆ, 15, 3.

ಶ್ರೀ ಎಸ್.ಎಸ್. ಪಾಟೀಲ್: ಈಗ ಸುಪ್ರೀಂ ಕೋರ್ಟ್ ಡಿಸಿಷನ್ ಆದಮೇಲೆ ನೀವೇನು ಮಾಡುತ್ತೀರಿ?

ಡಾ: ಜಿ. ರಮೇಶ್ವರ್: ಇದನ್ನು ಹೇಳಿ ಬಿಟ್ಟು ನಂತರ ಆ ವಿಚಾರಕ್ಕೇ ನಾನು ಬರುತ್ತೇನೆ. ವಿಷಯದ ಹಿನ್ನೆಲೆ ಹೇಳಿದರೆ ತಾನೇ ಮುಂದಿನ ವಿಚಾರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್: ಆ ಅಂಶದ ಬಗ್ಗೆ ತಾವು ಈಗ ಹೇಳಿ ಬಿಟ್ಟರೆ ಸಾಕು. ಈಗ ಪ್ರಶ್ನೆ ಇರುವುದು ಈ ವಿಚಾರದಲ್ಲಿ ಹಿಂದೆ ಮೀಸಲಾತಿ ಪ್ರಕಾರ ಸೀಟುಗಳ ಹಂಚಿಕೆಯಾಗಿರುವುದು ಎಲ್ಲರಿಗೂ ತಿಳದಿದೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲ್‌ರವರೇ, ಮಾನ್ಯ ಸಚಿವರು ಈಗ ಆ ವಿಚಾರಕ್ಕೇ ಬರುತ್ತಿದ್ದಾರೆ. ಅಲ್ಲಿಯವರೆಗೂ ತಾವು ಸ್ವಲ್ಪ ತಾಳ್ಮೆಯಿಂದಿರಿ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್: ಬೆಳಿಗ್ಗೆ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ಕರೆದಿದ್ದಿರಿ. ಅಲ್ಲಿ ಏನು ತೀರ್ಮಾನವಾಯಿತು ಎಂಬುದನ್ನು ಮೊದಲು ಹೇಳಿ.

ಡಾ: ಜಿ. ಪರಮೇಶ್ವರ್: ಅದನ್ನೂ ಹೇಳುತ್ತೇನೆ. ನಾನು ಆ ಬಗ್ಗೆ ಕೊನೆಗೆ ಹೇಳೋಣ ಎಂದುಕೊಂಡಿದ್ದೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಆತುರ ಪಡುವುದೇಕೆ? ಮಾನ್ಯ ಸಚಿವರು ಎಲ್ಲವನ್ನೂ ತಿಳಿಸುತ್ತಾರೆ, ತಾವು ಸ್ವಲ್ಪ ತಾಳ್ಮೆಯಿಂದಿರಿ.

ಡಾ: ಜಿ. ಪರಮೇಶ್ವರ್: ಮಾನ್ಯ ಉಪಾಧ್ಯಕ್ಷರೇ, ಶೇಕಡ 15 ಮತ್ತು ಶೇಕಡ 3ರಷ್ಟು ಮೀಸಲಾತಿಯನ್ನು ಕ್ರಮವಾಗಿ ಎಸ್.ಸಿ. ಮತ್ತು ಎಸ್.ಟಿ. ಕೊಡಲಾಗಿದೆ. ಕ್ಯಾಟಗರಿ-1 ಗೆ ಶೇಕಡ 4ರಷ್ಟು 2ಎಗೆ ಶೇಕಡ 15ರಷ್ಟು 2ಬಿಗೆ ಶೇಕಡ 4ರಷ್ಟು ಮತ್ತು 3ಬಿಗೆ ಶೇಕಡ 5ರಷ್ಟು ಮೀಸಲಾತಿಯನ್ನು ಸೀಟು ಹಂಚಿಕೆಯಲ್ಲಿ ನೀಡಲಾಗಿದೆ. ಮಾನ್ಯ ಪಾಟೀಲ್ ಸಾಹೇಬರೇ, ನಾನು ಈ ವಿಚಾರವನ್ನು ಏತಕ್ಕಾಗಿ ಹೇಳುತ್ತಿದ್ದೇನೆ. ಎಂದರೆ, ಸಾಮಾಜಿಕ ನ್ಯಾಯದ ಉದ್ದೇಶದಿಂದ ಈ ಮೀಸಲಾತಿಯನ್ನು ಕೊಡಲಾಗಿದೆ. ಈ ಕ್ಯಾಟಗರಿಯಲ್ಲಿ ಬರತಕ್ಕಂಥ ಬಡ ಮಕ್ಕಳಿಗೆ ಅದರಲ್ಲೂ ಇಂಟರ್ ಸೇ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ಸಿ.ಇ.ಟಿ. ಮೂಲಕ ಹಂಚಿ ಸಾಮಾಜಿಕ ನ್ಯಾಯ ಒದಗಿಸುವ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಮಾಡಲಾಗಿದೆ. ಇವತ್ತು ನಮ್ಮ ಮುಂದಿರತಕ್ಕಂಥ ಪ್ರಶ್ನೆ ಏನೆಂದರೆ, ಈ ರಿಸರ್ವೇಷನ್ ಅನ್ನು ನಾವು ಉಳಿಸಿಕೊಳ್ಳಬೇಕು.

ಸಾಮಾಜಿಕ ನ್ಯಾಯವನ್ನು ಕೊಡಬೇಕಾದರೆ ನಾವು ಈ ರಿಸರ್ವೇಷನ್ ಅನ್ನು ಉಳಿಸಿಕೊಳ್ಳಬೇಕು. ಏತಕ್ಕಾಗಿ ಮೀಸಲಾತಿ ಕೊಡಬೇಕೆಂದು ಹೇಳುವ ಸಲುವಾಗಿಯೇ ನಾನು ಈ ಮಾಹಿತಿಗಳನ್ನು ಸದನಕ್ಕೆ ತಿಳಿಸಿದೆ. ಸರ್ಕಾರದ ಉದ್ದೇಶ ಈ ರಿಸರ್ವೇಷನ್ ಅನ್ನು ಉಳಿಸಬೇಕು, ಈ ಬಡ ಮಕ್ಕಳಿಗೆ ಮೆಡಿಕಲ್, ಇಂಜಿನಿಯರಿಂಗ್ ಮತ್ತು ಡೆಂಟಲ್ ಗೆ ಸಿಗಬೇಕು ಎನ್ನತಕ್ಕಂಥದ್ದು ಆಗಿದೆ. ಅದರಲ್ಲೂ ಈ ಕ್ಯಾಟಗರಿಗಳಲ್ಲಿ ಇಂಟರ್ ಸೇ ಮೇರಿಟ್ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ? ಸುಪ್ರೀಂ ಕೋರ್ಟ್‌ನ ಆದೇಶದ ಕೆಲವೊಂದು ಪ್ಯಾರಾಗ್ರಾಫ್‌ನಲ್ಲಿ ಮ್ಯಾನೇಜ್‌ಮೆಂಟ್‌ನವರು ತಾವೇ ಎಲ್ಲಾ ಅಡ್ಮಿಷನ್ಸ್ ಮಾಡಬಹುದು ಮತ್ತು ಅವರೇ ಫೀ ಸ್ಟ್ರಕ್ಚರ್ ಅನ್ನು ನಿಗದಿ ಮಾಡಬಹುದು ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದಾರೆ. ಇನ್ನು ಕೆಲವೊಂದು ಪ್ಯಾರಾಗ್ರಾಫ್‌ನಲ್ಲಿ ಗೌರ್ನಮೆಂಟ್ ಇದನ್ನು ರೆಗ್ಯೂಲೇಟ್ ಮಾಡಬಹುದು, ರೂಲ್ಸ್ ಅನ್ನು ಮಾಡಬಹುದು ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದಾರೆ. ಸರ್ಕಾರ ಯಾವುದೇ ಕಾರಣಕ್ಕೂ, ನನ್ನನ್ನೂ ಸೇರಿಕೊಂಡು, ನಾನು ಇಲ್ಲಿ ಸಚಿವನಾಗಿ ಇರಬಹುದು, ಸಿದ್ದಾರ್ಥ ವಿದ್ಯಾ ಸಂಸ್ಥೆಯ ಮ್ಯಾನೇಜ್‌ಮೆಂಟ್‌ನಲ್ಲಿ ನಾನೂ ಕೂಡ ಒಬ್ಬ ಸದಸ್ಯನಾಗಿರಬಹುದು, ಆದರೆ ನನಗೆ ಪ್ರಾಮುಖವಾಗಿರತಕ್ಕಂಥದ್ದು ಸರ್ಕಾರದ ಮತ್ತು ಈ ರಾಜ್ಯದ ವಿದ್ಯಾರ್ಥಿಗಳ ಹಿತದೃಷ್ಟಿ. ನನ್ನ ಸಂಸ್ಥೆಯ ಹಿತದೃಷ್ಟಿ ನನಗೆ ನಂತರ ಬರುತ್ತದೆ. ಮಾನ್ಯ ಸಿಂಧ್ಯಾರವರಿಗೆ ನಾನು ಬಹಳ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ತಂದೆಯವರು ಸಿದ್ದಾರ್ಥ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿದ ಉದ್ದೇಶ ಕೂಡ ನನ್ನ ತಲೆಯಲ್ಲಿದೆ. ಅದನ್ನು ಗಮನದಲ್ಲಿಟ್ಟುಕೊಂಡೇ ಇವತ್ತಿನ ದಿವಸ, ನಾನು ಸಚಿವ ಸ್ಥಾನವನ್ನು ಬಿಡಬಹುದಾಗಿತ್ತು, ನನ್ನ ಸಚಿವ ಸ್ಥಾನವನ್ನು ಪಕ್ಕಕ್ಕೆ ಇಟ್ಟುಬಿಟ್ಟು, ಯಾರಾದರೂ ಮಾಡಿಕೊಳ್ಳಿ ಸ್ವಾಮಿ, ನಾನು ಆಮೇಲೆ ಬೇಕಾದರೆ ಬರುತ್ತೇನೆ, ಇಲ್ಲದಿದ್ದರೆ ಬರದಿದ್ದರೂ ಪರವಾಗಿಲ್ಲ, ಅಥವಾ ನೀವು ಹೇಳಿದಂತೆ ಬೇರೆ ಖಾತೆ ಕೊಡಬಹುದು ಎನ್ನತಕ್ಕಂಥ ಮಾತನ್ನು ನಾನೇ ಹೇಳಬಹುದಾಗಿತ್ತು. ಆದರೆ ಇದನ್ನು ಒಂದು ಉದಾಹರಣೆಯಾಗಿ, ಇದು ಈ ರಾಜ್ಯದಲ್ಲಿ ಆಗಬೇಕು, ಈ ತಪ್ಪು ಕಲ್ಪನೆ ಹೋಗಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಉಳಿದುಕೊಂಡು ಇವತ್ತಿನ ದಿವಸ ಯಾವುದೇ ಕಾರಣಕ್ಕೂ, ಸರ್ಕಾರವಾಗಲೀ, ನಾನಾಗಲೀ ಯಾರ ಜೊತೆಗೂ ಶಾಮೀಲಾಗಿಲ್ಲ. Let me clarify this. ನಾನು ಯಾರ ಮುಲಾಜಿಗೂ ಒಳಪಟ್ಟಿಲ್ಲ. ನಾವು ಏನೋ ಒಂದು ಪರ್ಸಂಟೇಜ್ ಡಿಕ್ಲೇರ್ ಮಾಡಿ, 50 ಪರ್ಸಂಟೋ, 25 ಪರ್ಸಂಟೋ, 30 ಪರ್ಸಂಟೋ, ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ, ಆಯಿತು, ನನ್ನ ಕೆಲಸ ಇಲ್ಲಿಗೆ ಮುಗಿದು ಹೋಯಿತು, ನೀವು ಹೋಗಿ ಸ್ಟೇ ತೆಗೆದುಕೊಳ್ಳಿ, ಏನಾದರೂ ಮಾಡಿಕೊಳ್ಳಿ ಎನ್ನತಕ್ಕಂಥ ದೃಷ್ಟಿಯಿಂದ ನಾವು ಇರಹಬುದಾಗಿತ್ತು. ಆದರೆ ನನ್ನ ಉದ್ದೇಶ ಅದಲ್ಲ. ಸನ್ಮಾನ್ಯ ಡಿ.ಬಿ.ಚಂದ್ರೇಗೌಡರು ಏತಕ್ಕೆ ರಿವ್ಯೂ ಹಾಕಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ರಿವ್ಯೂ ನೀವು ಏತಕ್ಕಾಗಿ ಹೋಗಬೇಕು? ರಿವ್ಯೂ ಹೋಗಬೇಕಾಗಿರತಕ್ಕಂಥದ್ದು ಅಡ್ಮಿಷನ್‌ಗೆ ಮತ್ತು ಫೀ ಸ್ಟ್ರಕ್ಚರ್‌ಗೆ, ಎರಡನ್ನೂ ಕೂಡ 11 ಜಡ್ಜಸ್ ಹೇಳಿಬಿಟ್ಟಿದ್ದಾರೆ. ಕ್ಲಿಯರ್ ಆಗಿ ಡೈರೆಕ್ಷನ್ಸ್ ಅನ್ನು ಕೊಟ್ಟು ಬಿಟ್ಟಿದ್ದಾರೆ. ನಾವು ಮತ್ತೆ ಅದೇ ಬೆಂಚ್‌ನ ಮುಂದೆ ಹೋಗಬೇಕಾಗುತ್ತದೆ. ಅನಂತರ ಬೇಕಾದರೆ ನಾವು 13 ಬೆಂಚ್‌ಗೆ ಹೋಗಬಹುದು. 11 ಜಡ್ಜಸ್ ಬೆಂಚ್ ಮುಂದೆ ನಾವು ಮತ್ತೆ ರಿವ್ಯೂ ಹೋಗಿ, ಇಲ್ಲಾ ಅನ್ನಿಸಿಕೊಂಡು ಬಂದರೆ, ನಮಗೆ ಯಾವುದೇ ಅವಕಾಶಗಳೂ ಕೂಡ

ಇಲ್ಲದಂತಾಗುತ್ತದೆ, ನಮ್ಮ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. 13 ಜಡ್ಜಸ್ ಬೆಂಚ್ ಸಹ ಹೋಗಬಹುದಾಗಿತ್ತು. ಸ್ವಾಮಿ 11 ಜಡ್ಜಸ್ ಬೆಂಚ್ ಮಾಡುವುದಕ್ಕೆ 10 ವರ್ಷ ತೆಗೆದುಕೊಳ್ಳಲಾಗಿದೆ. ಇನ್ನು 13 ಜಡ್ಜಸ್ ಮಾಡುವುದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳುತ್ತಿತ್ತೋ ಗೊತ್ತಿಲ್ಲ. ಅಷ್ಟರವರೆಗೂ ನಾವು ಕಾಯಬೇಕು ಅನ್ನತಕ್ಕಂಥದ್ದು ಇಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಡಾ: ಜಿ. ಪರಮೇಶ್ವರ್: ದಯವಿಟ್ಟು ಮೊದಲು ನನಗೆ ಮಾತನಾಡಿ ಮುಗಿಸಲು ಅವಕಾಶ ಮಾಡಿಕೊಡಿ. ನಂತರ ಬೇಕಾದರೆ ತಾವು ಕ್ಲಾರಿಫಿಕೇಷನ್‌ಗಳನ್ನು ಕೇಳಬಹುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಒಂದೇ ಒಂದು ಕ್ಲಾರಿಫಿಕೇಷನ್ ಅನ್ನು ಈಗಲೇ ಕೇಳಿಬಿಡುತ್ತೇನೆ. 11 ಜಡ್ಜ್‌ಸ್ ಬೆಂಚ್ ಮುಂದೆ ಸ್ಟೇಟ್ ಗೌರ್ನಮೆಂಟ್ ಪರವಾಗಿ ಆರ್ಗ್ಯೂ ಮಾಡಿದಂತಹವರ್‍ಯಾರು?

ಡಾ: ಜಿ. ಪರಮೇಶ್ವರ್: ಮಾನ್ಯ ಸದಸ್ಯರಿಗೆ ಅಡ್ವೋಕೇಟ್ಸ್ ಹೆಸರುಗಳೆಲ್ಲಾ ಬೇಕೆಂದರೆ, ಆ ಬಗ್ಗೆ ಮಾನ್ಯ ಚಂದ್ರೇಗೌಡರು ತಿಳಿಸುತ್ತಾರೆ. ಆ ಕೇಸ್ 10 ವರ್ಷ ನಡೆದಿದೆ. ಹತ್ತು ವರ್ಷದ ಅವಧಿಯಲ್ಲಿ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ಅಡ್ವೋಕೇಟ್ಸ್ ಇದ್ದರು ಎಂಬ ಬಗ್ಗೆ ಒಂದು ಲಿಸ್ಟ್ ಅನ್ನೇ ತಮಗೆ ನಾನು ಕೊಟ್ಟು ಬಿಡುತ್ತೇನೆ. ಅದರಲ್ಲಿ ಏನೂ ತೊಂದರೆಯಿಲ್ಲ. ಅದರಲ್ಲಿ ಯಾವ ಮುಚ್ಚುಮರೆಯೂ ಕೂಡ ಇಲ್ಲ. ನಮಗೆ ಅಂದರೆ ಸರ್ಕಾರಕ್ಕೆ ಒಂದು ಸ್ಕೀಮ್ ಅನ್ನು ಕೇಳಿದ್ದರು. ಆ ಸ್ಕೀಮ್ ಅನ್ನೂ ಕೂಡ ಸರ್ಕಾರ ಅಲ್ಲಿಗೆ ಕೊಟ್ಟಿದೆ. ಇಲ್ಲಿ ವಿಷಯ ಏನಾಗಿದೆ ಎಂದರೆ, ತಮಗೆ ಆಶ್ಚರ್ಯವೇನೂ ಇಲ್ಲ, ಇದು ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಈ ಕೇಸ್ ಬಂದಿದ್ದೇ ಕರ್ನಾಟಕ ರಾಜ್ಯ ಸರ್ಕಾರದಿಂದ. ಬೇರೆ ಯಾರೂ ಇದನ್ನು ಹಾಕಲಿಲ್ಲ. ಈ ಸಂಗತಿ ಇಲ್ಲಿಗೆ ಬಂದಿದ್ದೇ ಕರ್ನಾಟಕ ರಾಜ್ಯ ಸರ್ಕಾರದಿಂದ. ಟಿ.ಎಂ.ಎ. ಪೈ ಫೌಂಡೇಷನ್‌ನವರು ಸರ್ಕಾರಕ್ಕೆ ನಾವು ಸೀಟುಗಳನ್ನು ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರ ಮೇಲೆ ಕರ್ನಾಟಕ ರಾಜ್ಯ ಸರ್ಕಾರವೇ ಈ ಕೇಸ್ ಅನ್ನು ತೆಗೆದುಕೊಂಡು ಕೋರ್ಟಿಗೆ 1986ರಲ್ಲಿ ಹೋಯಿತು. ಅದು ಅಂದಿನಿಂದ ಇಲ್ಲಿಯವರೆಗೂ ಹತ್ತು ವರ್ಷಗಳ ಕಾಲ ನಡೆದುಕೊಂಡು ಬಂದಿದೆ. ಅದಕ್ಕಾಗಿ ನಾನು ಇವತ್ತು ಹೇಳುತ್ತಾ ಇರತಕ್ಕಂಥ ಮಾತು ಏನೆಂದು ಹೇಳಿದರೆ, ರಾಜ್ಯ ಸರ್ಕಾರ ಯಾರ ಜೊತೆಗೂ ಶಾಮೀಲಾಗಿಲ್ಲ, ಯಾರ ಮುಲಾಜಿಗೂ ಒಳಪಟ್ಟಿಲ್ಲ, ಒಳಪಡುವುದೂ ಇಲ್ಲ, ಶಾಮೀಲಾಗುವುದೂ ಇಲ್ಲ. ಇನ್ನು ಮುಂದೆ ಏನು ಮಾಡಬೇಕು? ನಾನು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟಿನ ಪ್ರತಿಯೊಂದು ವಿಚಾರವನ್ನೂ ಕೂಡ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಸಧ್ಯಕ್ಕೆ ಅದರ ಅವಶ್ಯಕತೆ ಇಲ್ಲ ಏಕೆಂದರೆ, ಈಗಾಗಲೇ ಎಲ್ಲಾ ನಾಯಕರುಗಳು ಆ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಾವು ಮೀಟಿಂಗ್ ಮೊದಲೇ ಕರೆಯಬೇಕಾಗಿತ್ತು. ಕರೆದಿದ್ದರೆ ನಾವು ಸಲಹೆಯನ್ನು ಕೊಡುತ್ತಿದ್ದೆವು ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರುಗಳು ಇಲ್ಲಿ ಪ್ರಸ್ತಾಪ ಮಾಡಿದರು. ಹೌದು, ಈ ದಿಸೆಯಲ್ಲಿ ಸ್ವಲ್ಪ ಅಚಾತುರ್ಯ ಆಗಿದೆ. ನಾವು ಬಹಳ ಸುಲಭವಾಗಿ ಇದನ್ನು ಬಗೆಹರಿಸಿ ಬಿಡುತ್ತೇನೆ, ಬಹಳ ಸುಲಭವಾಗಿ ಇದನ್ನು ಬಗೆಹರಿಸಿ, ಏನೋ ಒಂದು ತೀರ್ಮಾನಕ್ಕೆ ಸರ್ಕಾರ ಬರಬಹುದು ಎನ್ನುವಂತಹ ಆಶಾದಾಯಕ ಭಾವನೆ ಸರ್ಕಾರಕ್ಕೆ ಇತ್ತು. ಆದರೆ ಅದು ಆಗಲಿಲ್ಲ. ಈಗ ತಾವೆಲ್ಲಾ ಬಹಳ ಪರಿಣಿತರಿದ್ದೀರಿ. ಅದಕ್ಕೆ ಈಗ ನಾವು ನಿಮ್ಮ ಹತ್ತಿರವೇ ಬಂದಿದ್ದೇವೆ. ತಾವು ಸಲಹೆ ಕೊಡಿ. ಯಾವ ರೀತಿ ಮಾಡಬೇಕು ಎಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವೇನೋ ಪರಿಣಿತರೇ ಬಿಡಿ. ನೀವು ಸರ್ಟಿಫಿಕೇಟ್ ಕೊಟ್ಟಿರುವುದಕ್ಕೆ ತುಂಬಾ ಥ್ಯಾಂಕ್ಸ್. ನಿಮಗೆ ನಾವು ಕೇಳುವುದೇನೆಂದರೆ, ನೀವು ಮಾನ್ಯ ಮುಖ್ಯಮಂತ್ರಿಗಳ ಘನ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಯವರನ್ನೆಲ್ಲಾ ಕರೆದಿದ್ದೆವು ಎಂದು ಹೇಳಿದಿರಿ. ಆಗ ಸೀಟು ಮತ್ತು ಫೀಸ್ ಬಿಟ್ಟು ಬಾಕಿ ಇನ್ನೇನು ಮಾತನಾಡಿದಿರಿ? Education standard ಎಷ್ಟೊಂದು ಇಂಫ್ರೂವ್ ಮಾಡಬೇಕೆಂದು ಮಾತನಾಡಿದಿರಾ? ಅಂದು ನಡೆದ ಸಭೆಯ ನಡವಳಿಕೆಗಳನ್ನು ದಯವಿಟ್ಟು ಸದನದ ಮುಂದಿಡಿ. ನೀವು ಫೀಸ್ ಮತ್ತು ಸೀಟು ಹಂಚಿಕೆ ಹೊರತು ಪಡಿಸಿ ಇನ್ನೇನು ಮಾತನಾಡಿದಿರಿ?

ಡಾ: ಜಿ. ಪರಮೇಶ್ವರ್: ನಾವು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟಿನ ವಿಮರ್ಶೆಯ ಮಾತನ್ನು ಬಿಟ್ಟು, ಯಾರನ್ನೂ ನಾವು ಪರ್ಸಂಟೇಜ್ ಕೇಳಲೇ ಇಲ್ಲ. ನಾವು ಫೀಸ್ ಸ್ಟ್ರಕ್ಚರ್ ಅನ್ನೂ ಕೂಡ ಅವರಿಗೆ ಕೇಳಲಿಲ್ಲ. ಸದರಿ ಸಭೆಯ ಪ್ರೊಸೀಡಿಂಗ್ಸ್ ಅನ್ನು ಬೇಕಾದರೆ ನಾನು ಕೊಡುತ್ತೇನೆ. ಸುಪ್ರೀಂ ಕೋರ್ಟ್‌ನ ತೀರ್ಪು ಈ ರೀತಿ ಬಂದಿದೆ, ಇದರ ಬಗ್ಗೆ ತಮ್ಮ ಅಭಿಪ್ರಾಯಗಳೇನು? ಇದರ ವಿಮರ್ಶೆ ಹೇಗೆ ಮಾಡುತ್ತೀರಿ? ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನಿಮ್ಮ ಸಲಹೆ ಸೂಚನೆಗಳನ್ನು ಕೊಡಿ ಎಂಬ ಮಾತುಗಳನ್ನು ಮಾತ್ರ ನಾವು ಅಂದಿನ ಸಭೆಯಲ್ಲಿ ಆಡಿದೆವು. ಅದನ್ನು ಬಿಟ್ಟರೆ...

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅಂದರೆ, ನಿಮ್ಮ ಅಭಿಪ್ರಾಯದಲ್ಲಿ ಪ್ರೈವೇಟ್ ಇಂಜಿನಿಯರಿಂಗ್ ಕಾಲೇಜಿನ ಮಾಲೀಕರು, ಮೆಡಿಕಲ್ ಕಾಲೇಜಿನ ಮಾಲೀಕರು, ಟಿ.ಸಿ.ಹೆಚ್. ಸಂಸ್ಥೆಗಳ ಮಾಲೀಕರು ಬಿ.ಎಡ್. ಸಂಸ್ಥೆಗಳ ಮಾಲೀಕರು ಶಿಕ್ಷಣ ತಜ್ಞರೇ? ಇವರೆಲ್ಲಾ ಡಾ: ಹೆಚ್. ನರಸಿಂಹಯ್ಯನವರು, ಎಂ.ಪಿ.ಎಲ್. ಶಾಸ್ತ್ರಿ ಇತ್ಯಾದಿಗಳು ಅಂತನಾ.

ಡಾ:ಜಿ. ಪರಮೇಶ್ವರ್: ಕೆಲವರಾದರೂ ಅದರಲ್ಲಿ ಶಿಕ್ಷಣ ತಜ್ಞರಾಗಿದ್ದಾರೆ. ಯಾರನ್ನೂ ತೀರಾ ನಾವು ತೆಗೆದು ಹಾಕುವಂತಿಲ್ಲ. ಸಂಸ್ಥೆಗಳನ್ನು ನಡೆಸಿದಂತಹವರಿಗೆ ಅದರ ಆಗು ಹೋಗುಗಳ ಬಗ್ಗೆ ಗೊತ್ತಿರುತ್ತದೆ ಎನ್ನುವ ಉದ್ದೇಶಕ್ಕಾಗಿ ಅವರ ಸಭೆಯನ್ನು ಕರೆದಿದ್ದೆವು. ನಮಗೇನೂ ಅವರಿಂದ....

ಶ್ರೀ ಎಸ್.ಶಿವಣ್ಣ: ಸಿದ್ಧಾರ್ಥ ಸಂಸ್ಥೆಯ ಸ್ಥಾಪಕರು ಇದ್ದರಲ್ಲಾ ಅಂತಹವರು ಯಾರಾದರೂ ಇದ್ದರೆ ನಾವು ಒಪ್ಪಿಕೊಂಡು ಬಿಡುತ್ತೇವೆ.

ಡಾ: ಜಿ. ಪರಮೇಶ್ವರ್: ಆಗಬಹುದು, ಕೆಲವರು ಅಂತಹವರೂ ಕೂಡ ಅದರಲ್ಲಿ ಇದ್ದಾರೆ, ಅದಕ್ಕೇ ನಾನು ಕೆಲವರು ಇದ್ದಾರೆ ಎಂದು ಹೇಳಿದ್ದು. ನಮಗೆ ಅಂತಹ ಉದ್ದೇಶ ಏನಿತ್ತು ಎಂದರೆ, ಅವರ ಅಭಿಪ್ರಾಯಗಳನ್ನು ಕೂಡ ಸಂಗ್ರಹ ಮಾಡುವುದು, ನಾಳೆ ದಿವಸ ತಾವು ಹೇಳಿದಿರಿ ನಮಗೆ ಮಾತು ಒಂದು ಕೇಳಿದರೆ ನಾವು ಸಲಹೆ ಕೊಡುತ್ತಿದ್ದೆವು ಎನ್ನುವ ಮಾತು ಹೇಳಿದಿರಿ. ಸರ್ಕಾರ ಏಕೆ ನಮ್ಮನ್ನು ಕೆಟ್ಟ ಕಣ್ಣಿನಿಂದ ನೋಡುತ್ತಿದ್ದೆ ನಾವೆಲ್ಲಾ ಒಳ್ಳೆಯವರಿದ್ದೇವೆ. ನಮ್ಮನ್ನು ಕೇಳಿದ್ದರೆ ಒಂದು ಸಲಹೆ ಕೊಡುತ್ತಿದ್ದೆವು ಎನ್ನುವ ಮಾತು ಹೇಳಬಹುದು. ಅಥವಾ ಒಳ್ಳೆಯ ಸಲಹೆ ಬರಬಹುದು, ಆ ದೃಷ್ಟಿಯಿಂದ ಅಷ್ಟೇ ಅವರನ್ನು ನಾವು ಕರೆದಿದ್ದೇವೆ ಎನ್ನುವ ಮಾತನ್ನು ಹೇಳುತ್ತೇವೆ. ಇವತ್ತು ಹಾಗೆ ಆ ಸಭೆಯನ್ನು ನಾವು ಕರೆದಿದ್ದೆವು ಬೆಳಗ್ಗೆ ತಾವೆಲ್ಲಾ ಆ ಸಭೆಗೆ ಬಂದಿದ್ದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಹಳ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳು ಕೆಲವು ಬಹಳ ಪ್ರಮುಖವಾದ ವಿಚಾರಗಳನ್ನು ಇಲ್ಲಿ

ಸದನಕ್ಕೆ ತಿಳಿಸುತ್ತೇನೆ. ಸರ್ಕಾರ ಒಂದು ವೇಳೆ, ಅವಶ್ಯಕತೆ ಬಿದ್ದಲ್ಲಿ ಒಂದು ಹೊಸ ಕಾನೂನನ್ನು ತರತಕ್ಕಂಥದ್ದು, ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಆ್ಯಕ್ಟ್ ತರುವುದಕ್ಕೆ ತರತಕ್ಕಂತಹ ಅವಕಾಶ ಇಲ್ಲಿ ಇದ್ದರೆ, ಈ ಸದನದಲ್ಲಿ ನಾವು ತರತಕ್ಕಂಥದ್ದು ಇದ್ದರೆ, ಅದನ್ನು ತರತಕ್ಕಂಥದ್ದು ಎನ್ನುವ ಸಲಹೆ ನಾವು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಕಾನೂನು ಇಲಾಖೆಯಲ್ಲಿ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ. ಈಗಿರತಕ್ಕಂತಹ ವಿಚಾರ ಏನೆಂದರೆ, ಎಜ್ಯುಕೇಷನ್ ಆ್ಯಕ್ಟ್ ಈಗ ಅಸ್ತಿತ್ವದಲ್ಲಿದೆ. ಕ್ಯಾಪಿಟೇಷನ್ ಅಬಾಲಿಷನ್ ಆ್ಯಕ್ಟ್ ಅಸ್ಥಿತ್ವದಲ್ಲಿ ಇದೆ. ಈ ಆ್ಯಕ್ಟ್ ಅಡಿಯಲ್ಲಿ ನಾವು 1997ರಲ್ಲಿ ಈ ರೂಲ್ಸ್ ಮಾಡಿರತಕ್ಕಂಥದ್ದು. ಅಡ್ಮಿಷನ್ ರೂಲ್ಸ್ ಸಿಇಟಿಗೆ ಮಾಡಿರತಕ್ಕಂಥದ್ದು ಈಗಿರತಕ್ಕಂತಹ ಎಜ್ಯುಕೇಷನ್ ಆ್ಯಕ್ಟ್‌ನ ಚೌಕಟ್ಟಿನಲ್ಲಿ. ಆದ್ದರಿಂದ ಆ ಆ್ಯಕ್ಟ್ ಇರುವಾಗಲ್ಲೇ ಆ ಆ್ಯಕ್ಟ್ ಅಡಿಯಲ್ಲಿ ಮತ್ತೊಂದು ಸಾರಿ ನಾವು ಈ ರೂಲ್ಸ್ ಅಡ್ಮಿಷನ್ ರೂಲ್ 2003 ತರುವುದಕ್ಕೆ ಅವಕಾಶ ಇದೆ ಎನ್ನುವ ಮಾತು ಹೇಳಿದ್ದಾರೆ. ಅದನ್ನೂ ಕೂಡ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಕಾಮನ್ ಎಂಟ್ರೆನ್ಸ್ ಟೆಸ್ಟ್ ಸಿಇಟಿ ಏನಿದೆ, ಇಡೀ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀರಾಷ್ಟ್ರದಲ್ಲಿ ಪ್ರತಿಷ್ಠಿತವಾದ ಈ ಸಿಇಟಿಯನ್ನು ಉಳಿಸಬೇಕೆಂಬ ತೀರ್ಮಾನ ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ಬಹುಶ: Somewhere in my hind sight I said, CET will continue" ಎಂದು ಹೇಳಿಕೊಂಡು ಬಂದಿದ್ದೇನೆ. ಇವತ್ತೂ ಕೂಡ ಆ ಮಾತನ್ನು ಪ್ರತಿಪಾದಿಸುತ್ತೇನೆ. CET will continue. ಆದ್ದರಿಂದ ಮುಂದೆ ಅದರಲ್ಲಿ ಬರತಕ್ಕಂತಹ ಯಾವ ರೀತಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರಲ್ಲಿ ನಾವು ಆ ತೀರ್ಮಾನವನ್ನು ಅಂತಿಮವಾಗಿ ಸಂಪುಟಕ್ಕೆ ತೆಗೆದುಕೊಂಡು ಹೋಗಿ ತಮ್ಮೆಲ್ಲರ ಸಲಹೆ ಸೂಚನೆ ಏನಿದೆ ಅದನ್ನು ಕೂಡ ತೆಗೆದುಕೊಂಡು ಹೋಗಿ ಅಂತಿಮವಾದ ತೀರ್ಮಾನ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಬಿ. ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೆ, ಈ ಸಿಇಟಿ ರೂಲ್ಸ್‌ನ್ನು 1997ರಲ್ಲಿ ಪಾರದರ್ಶಕವಾಗಿ ನಾವು ಏನು ತಂದಿವೆ, ಅದು ಉಳಿಸಿಕೊಳ್ಳಬೇಕು. ಯಾವ ಆಧಾರದ ಮೇಲೆ 1983ರಲ್ಲಿ ನಾವು ಎಜ್ಯುಕೇಷನ್ ಆ್ಯಕ್ಟ್ ತಂದಿವೆ. That has got the assent of the President of India. ಗವರ್ನಮೆಂಟ್ ಆಫ್ ಇಂಡಿಯಾದವರು ಅದನ್ನು ಮಾಡಿ ಪ್ರೆಸಿಡೆಂಟ್ ಆಫ್ ಇಂಡಿಯಾಗೆ ಅಸೆಂಟ್‌ಗಾಗಿ ಕೊಟ್ಟು ಅದು ಬಂದಿದೆ. Abolition of Capitation Fee Act ಈ ಎರಡು ಆ್ಯಕ್ಟ್ ಅಡಿಯಲ್ಲಿ ಈ ರೂಲ್ಸ್ ತಂದು ಜಾರಿಯಲ್ಲಿ ಬಂದಿತು. You stick to the rules of . 1997ರ ರೂಲ್ಸ್‌ಗೆ ನಾವು ಸ್ಟಿಕ್ ಆಗುತ್ತೇವೆ. ಈ ಆಧಾರದ ಮೇಲೆ ಅವರು ಕೋರ್ಟಿಗೆ ಹೋಗುವುದಾದರೆ ಹೋಗಲಿ. ಅವರು ಏನು ಬೇಕಾದರೂ ಮಾಡಲಿ ತಾವು ಇವತ್ತು ಒಳ್ಳೆಯ ಕೆಲಸ ಮಾಡಿದ್ದೀರಿ. ನಾನು ಏನು ಅಂದುಕೊಂಡಿದ್ದೇನೆ ಎಂದರೆ, ತಾವು ಮ್ಯಾನೇಜ್‌ಮೆಂಟ್‌ನವರು, ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ಮಿಟಿಂಗ್ ಕರೆದಿರಿ. ಸುಮಾರು ಎರಡು ತಿಂಗಳುಗಳ ಹಿಂದೆ ಅದು ಆದ ತಕ್ಷಣ ಮೀಟಿಂಗ್ ನಿಂದ ಹೊರಗಡೆ ಬಂದ ತಕ್ಷಣ ಕೆಲವು ಮ್ಯಾನೇಜ್‌ಮೆಂಟ್ ಮುಖ್ಯಸ್ಥರು ಹೇಳಿದ್ದಾರೆ, ಅದನ್ನು ನಾವು ಒಪ್ಪುವುದಕ್ಕೆ ತಯಾರಿಲ್ಲ. ಸಿಇಟಿ ಮಾಡುವುದಕ್ಕೆ ಅವಕಾಶವಿಲ್ಲ. ನಾವೇ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆಗ ತಕ್ಷಣ We want the cooperation of opposition leaders, ನೀವು ಎಲ್ಲಾ ಪಾರ್ಟಿಯವರೂ ಬನ್ನಿ ಇದನ್ನು ಏನು ಮಾಡೋಣ,

ಇವರು ಈ ರೀತಿ ನಿಲುವು ತೆಗೆದುಕೊಂಡಿದ್ದಾರೆಂದು ಹೇಳಿದ್ದಿದ್ದರೆ. ಚೆನ್ನಾಗಿರುತ್ತಿತ್ತು ರೂಲ್ 69ಕ್ಕೆ ಬಂದ ಮೇಲೆ ಕರೆದಿದ್ದಾರೆ. ಎರಡು ತಿಂಗಳಲ್ಲಿ ನಾವು ಕೊಟ್ಟ ಸಲಹೆಗಳು ನೀವು ಇಟ್ಟ ಆದೇಶಗಳು ಇದಕ್ಕೆ ಸ್ವಲ್ಪ ಕಾಲಾವಕಾಶ ಆದರೂ ಸಿಗುತ್ತಿತ್ತು. ನಾವು ಕೊಟ್ಟ ಸಲಹೆಯನ್ನು ತಾವು ಒಪ್ಪಿಕೊಂಡಿರಿ. ಸಿಇಟಿ ಮಾಡುತ್ತೇವೆ, ಇಷ್ಟು ಪರ್ಸೆಂಟೇಜ್ ಅವರಿಗೆ ಪರ್ಸೆಂಟೇಜ್ ಬಿಟ್ಟು ಇಷ್ಟು ಪರ್ಸೆಂಟೇಜ್ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೀರಿ. What is the gurantee that they will accept this? ಆಗ ಏನಾದರೂ ಹೆಚ್ಚು ಕಡಿಮೆಯಾಗಿ ಕೋರ್ಟಿಗೆ ಹೋಗಿ ಸ್ಟೇ ತಂದರು ಎಂದು ಇಟ್ಟುಕೊಳ್ಳೋಣ. What will happen to the furture of our students? Hardly we have got one or two months left. ಈ ದಿಕ್ಕಿನಲ್ಲಿ ತಾವು ಎಡವಿದ್ದೀರಿ ಎನ್ನುವುದು ನಮ್ಮ ಅಭಿಪ್ರಾಯ.

ಡಾ: ಜಿ. ಪರಮೇಶ್ವರ್: ತಾವು ಕೊಟ್ಟ ಸಲಹೆಯನ್ನು ಬಹಳ ಗೌರವದಿಂದ ಕೇಳಿದ್ದೇವೆ. ಏಕೆಂದರೆ, ಒಳ್ಳೆಯ ಕೆಲಸ ಮಾಡುವುದಕ್ಕೆ ರಾಜ್ಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಯಾವ ರಾಜಕೀಯವನ್ನೂ ಇಲ್ಲಿ ಬೆರೆಸುವುದಿಲ್ಲ. ಯಾವ ರಾಜಕೀಯ ಬೆರೆಸಬೇಕಾದ್ದೂ ತಮಗೂ ಅವಶ್ಯಕತೆ ಇಲ್ಲ, ನಮಗೂ ಅವಶ್ಯಕತೆ ಇಲ್ಲ. ಒಟ್ಟಾರೆ ವೃತ್ತಿ ಶಿಕ್ಷಣದ ಬಗ್ಗೆ ನಮಗೆಲ್ಲರಿಗೂ ಕಾಳಜಿ ಇದೆ ಆದರಿಂದ ಇವತ್ತು ನಾವು ಆ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟು ಕೊಂಡು ಮುಂದೆ ಯಾವ ರೀತಿ ಮಾಡಬೇಕು, ತಾವು ಅಂತಿಮವಾಗಿ ಹೇಳಿದಿರಿ, ಕ್ಯಾಪಟೇಷನ್ ಅಬಾಲಿಷನ್ ಆ್ಯಕ್ಟ್‌ನ ಚೌಕಟ್ಟಿನಲ್ಲಿರುವ ಅವಕಾಶಗಳು...

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಪ್ರಶ್ನೆ ಇರುವುದು ಮಾನ್ಯ ಎಸ್.ಎಸ್. ಪಾಟೀಲರು ನೀವು ಉತ್ತರ ಕೊಡುವ ಸಂದರ್ಭದಲ್ಲಿ ಫಂಡಮೆಂಟಲ್ ವಿಚಾರವನ್ನು ಪ್ರಸ್ತಾಪ ಮಾಡಿದರು. ನೀವು ಏನು ಹೇಳುತ್ತೀರಿ ಎಂದರೆ, ನಿಮ್ಮ ಬೆನ್ನು ನೀವೇ ತಟ್ಟಿಕೊಳ್ಳುತ್ತಿದ್ದೀರಿ. ನಾನು ಸಿಇಟಿ ಪರೀಕ್ಷೆ ಸುಪ್ರೀಂ ಕೋರ್ಟ್ ಆರ್ಡರ್ ಆದ ಮೇಲೆ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದೇನೆ ಎಂದರೆ, ಗವರ್ನಮೆಂಟ್ ಸೀಟ್‌ಗಳಿಗೆ ಇನ್ನು ಯಾವ ತರಹ ಮಾಡತ್ತೀರಿ? ಗವರ್ನಮೆಂಟ್ ಸೀಟ್ಸ್ ಇದ್ದೇ ಇದೆ. ಗವರ್ನಮೆಂಟ್ ಕಾಲೇಜ್ ಸೀಟು ಇನ್ನು ಪ್ರೈವೇಟ್‌ನವರಿಗೆ ಅದು ಹ್ಯಾಂಡ್ ಓವರ್ ಮಾಡಿಲ್ಲ. ಗವರ್ನಮೆಂಟ್ ಹಾಸ್ಪಿಟಲ್‌ಗಳನ್ನು ಪ್ರೈವೇಟ್‌ನವರೆಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಗವರ್ನಮೆಂಟ್ ಕಾಲೇಜ್‌ಗಳನ್ನು ಇದುವರೆಗೆ ಹ್ಯಾಂಡ್ ಓವರ್ ಮಾಡಿಲ್ಲ. ಏಡೆಡ್ ಇನ್‌ಸ್ಟಿಟ್ಯೂಷನ್ಸ್ ಇವೆ, ಬಿಎಮ್‌ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜ್ ಇಂತಹವು ಇವೆ. ಅವುಗಳಿಗೆ ಸಿಇಟಿ ಮಾಡಲೇ ಬೇಕು. ಅದರಲ್ಲಿ ಏನೂ ಹೆಚ್ಚುಗಾರಿಕೆ ಇಲ್ಲ. ಪ್ರಶ್ನೆ ಇರತಕ್ಕಂಥದ್ದು, ಮಾನ್ಯ ಸದಸ್ಯರು ಕೇಳಿರತಕ್ಕಂಥದ್ದು, ಖಾಸಗಿ ಕಾಲೇಜ್‌ನಲ್ಲಿರತಕ್ಕಂತಹ ಸೀಟ್‌ಗಳು ಏನಿವೆ, ಆ ಸೀಟ್‌ಗಳಿಗೆ ಸರ್ಕಾರದ ನಿಯಂತ್ರಣ ಇತ್ತು. ಫೀ ಸ್ಟ್ರಕ್ಚರ್ ಬಗ್ಗೆ ನಿಯಂತ್ರಣ ಇತ್ತು, ನಂಬರ್ ಆಫ್ ಸೀಟ್ಸ್ ಬಗ್ಗೆ ನಿಯಂತ್ರಣ ಇತ್ತು, ಅದನ್ನು ನೀವು ಕಳೆದುಕೊಂಡಿದ್ದೀರಿ. ಆ ಅಸ್ತ್ರವನ್ನು ನೀವು ಕಳೆದುಕೊಂಡಿದ್ದೀರಿ. ಆ ಪರಮೋಚ್ಚ ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ವಾದ. ಅದಕ್ಕೆ ಏನು ಮಾಡುತ್ತೀರಿ?

ಡಾ: ಎ.ಬಿ. ಮಾಲಕರೆಡ್ಡಿ: ವಿರೋಧ ಪಕ್ಷದ ಧುರೀಣರು ಹೇಳಿದರು, ಗವರ್ನಮೆಂಟ್ ಮೆಡಿಕಲ್ ಕಾಲೇಜ್ ಹ್ಯಾಂಡ್ ಓವರ್ ಆಗಿಲ್ಲ, ಆಸ್ಪತ್ರೆರೆಗಳನ್ನು ಹ್ಯಾಂಡ್ ಓವರ್ ಮಾಡಿದ್ದಾರೆಂದು ಹೇಳಿದರು. ಯಾವಳ ಆಸ್ಪತ್ರೆಗಳನ್ನು ಹ್ಯಾಂಡ್ ಓವರ್ ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಖಾಸಗಿ ಮೆಡಿಕಲ್ ಕಾಲೇಜುಗಳಿವೆ. ಖಾಸಗಿ ಮೆಡಿಕಲ್ ಕಾಲೇಜುಗಳು ಕಳೆದ 35 ವರ್ಷಗಳಲ್ಲಿ ಯಾರ ಕೃಪಾಪೋಷಿತ ಆಸ್ಪತ್ರೆಗಳಲ್ಲಿ ಅವರ ಒಳ ರೋಗಿಗಳಿಗೆ ಚಿಕಿತ್ಸೆಗಳನ್ನು ಕೊಟ್ಟಿದ್ದಾರೆ. ಡಾ: ಮಲಕರೆಡ್ಡಿಯವರಿಗೆ ನಾನು ಹೇಳತಕ್ಕಂತಹ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಇನ್ನು ಏನೆಂದರೆ, ಉದಾಹರಣೆಗೆ ರಾಯಚೂರಿನಲ್ಲಿ ಒಂದು ಹೈಟೆಕ್ ಆಸ್ಪತ್ರೆ ನಾವು ಕಟ್ಟಿಸಿದ್ದೇವೆ. ಅದು ನಾವು ನಿಸ್ಸಹಾಯಕರಾಗಿ ಇನ್ನು ಯಾರೂ ಗವರ್ನಮೆಂಟ್ ಸರ್ವೀಸ್‌ಗೆ ಬರುವುದಿಲ್ಲವೆಂದು ಅಪೋಲೋದವರಿಗೆ ಕಂಟ್ರಾಕ್ಟ್ ಸಿಸ್ಟಮ್ ಮೇಲೆ ಬೇಡಿಕೊಂಡು ಕೊಟ್ಟಿದ್ದೇವೆ. ಆ ಸಿಸ್ಟಮ್‌ನ ಮೆಡಿಕಲ್ ಕಾಲೇಜುಗಳು ನಾನು ಹೆಸರುಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಒಳ್ಳೆಯ ಹೈಟೆಕ್ ಮ್ಯಾನೇಜ್‌ಮೆಂಟ್ ನಿಮ್ಮದು ನೀವು ನಡೆಸಿ ಎಂದು ಗುತ್ತಿಗೆ ಕೊಡುವುದಕ್ಕೆ ನಾವು ಇನ್ನು ಹೋಗಿಲ್ಲವೆಂದು ಹೇಳಿದೆ ಅಷ್ಟೆ.

**SRI K. JAYAPRAKASH HEDGE:** Government hospitals are attached to private medical colleges ಅದನ್ನು ಮಾನ್ಯ ಸಿಂಧ್ಯರವರು ಹೇಳಿದ್ದು.

ಡಾ: ಎ.ಬಿ. ಮಲಕರೆಡ್ಡಿ: 1999ರಲ್ಲಿ ತಾವು ಬಂದಿರಿ, ಅನೇಕ ಮೆಡಿಕಲ್ ಕಾಲೇಜುಗಳು ಪ್ರಾರಂಭವಾದವು. ತಾವು ಮಾಡಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಪ್ಪಿಕೊಳ್ಳುತ್ತೇನೆ.

ಡಾ: ಎ.ಬಿ. ಮಲಕರೆಡ್ಡಿ: ಅದರಿಂದ ಪಬ್ಲಿಕ್‌ಗೆ ಏನೂ ಹಾನಿಯಾಗಿಲ್ಲ. ಉಲ್ಟ ಅದರಿಂದ ಉಪಯೋಗವಾಗಿದೆ. ಅಷ್ಟೊಂದು ಉನ್ನತ ಪದವಿ ಮತ್ತು ಅನುಭವ ಹೊಂದಿದ ತಜ್ಞರು ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸಮಾಡುವುದಕ್ಕೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಸಿಗುವುದಿಲ್ಲ. ಜಯದೇವ ಗವರ್ನಿಂಗ್ ಬಾಡಿ ಮೀಟಿಂಗ್ ಪ್ರಿಸೈಡ್ ಮಾಡಿ ನಾನು ಬಂದಿದ್ದೇನೆ. ನಾಲ್ಕೈದು ಸಲ ಅಡ್ವರ್ಟೈಸ್ ಮಾಡಿದರೂ ಕೂಡ ಲೆಕ್ಚರರ್ ಪೋಸ್ಟ್‌ಗೆ ಅರ್ಜಿ ಹಾಕುವುದಕ್ಕೆ ಯಾರೂ ತಯಾರಿಲ್ಲ. ಆಸ್ಪತ್ರೆ ಕ್ಲೋಸ್ ಮಾಡುತ್ತೀರಾ? ರಿಪೀಟೆಡ್ ಆಗಿ ನಾನು ಕ್ಲ್ಯಾರಿಫೈ ಮಾಡುತ್ತಿದ್ದೇನೆ. ಪಬ್ಲಿಕ್‌ನವರೂ ಪುನರುಚ್ಚಾರ ಮಾಡುತ್ತಾರೆ, ರಾಜಕೀಯ ಪಕ್ಷದ ಧುರೀಣರು ಇದನ್ನೇ ಮಾಡುತ್ತಾರೆ. ನಾವು ಅಪೋಲೋ ಹ್ಯಾಂಡ್ ಓವರ್ ಮಾಡಿಲ್ಲ. It is being run jointly. There is a governing body in which there are 7 members. Chairman of the governing body is the Health Minister whoever be the Health Minister and out of 7 members, 4 nominees are from the government including the health minister and 3 are from the Apollo Hospital that is because Apollo is super hitech hospital. today eventhough I am not the Health Minister, still I take lot of interest in that institution (hospital) because I come from that area. ತಿಂಗಳಿಗೆ 60,000 ರೂ ಕೊಡುತ್ತೇವೆಂದು ಹೇಳಿದರೂ ಯಾರೂ ಬರುವುದಕ್ಕೆ ತಯಾರಿಲ್ಲ. ಒಬ್ಬರು ಅಗರ್‌ವಾಲ್ ಎನ್ನುವವರು ಬಂದಿದ್ದರು. He was in America, just returned to India. He was given the appointment order. ಎಂಟು ದಿನ ಇದ್ದು ಆತ ಕೂಡ ಬಿಟ್ಟು ಹೋದ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ 42 ಕೋಟಿ ರೂಪಾಯಿ ಖರ್ಚು ಮಾಡಿದ ಭವ್ಯವಾದ ಸಕಲ ಸವಲತ್ತು ಹೊಂದಿದ ಆಸ್ಪತ್ರೆ ಕಟ್ಟಿ ಇದು ದುರುಪಯೋಗ ಆಗಬಾರದು ಎನ್ನುವ ಕಾರಣದಿಂದ ಅಪೋಲೋಗೆ ಕೊಟ್ಟಿದ್ದೇವೆ.

ಬ್ಯಾಕ್‌ಡೋರ್ ಎಂದು ಹೇಳಿದರು, ಬೇಡಿಕೊಂಡು ಅಲ್ಲ, ಟೆಂಡರ್ ಕರೆದೆವು, ಆ ಟೆಂಡರ್ ಕಮಿಟಿಯದಲ್ಲ ಯಾರಿದ್ದಾರೆ, ನಿರ್ಣಯ ಮಾಡುವವರು ಯಾರು? ಟಾಪ್ ಫೋರ್ ಐಎಎಸ್ ಆಫೀಸರ್ಸ್, ಡೈರೆಕ್ಟರ್ಸ್ ಇವೆಲ್ಲಾ ಕೂತು ಚರ್ವಿತ ಚರ್ವಣ ಆಗಿ ಆಗಿ ಕ್ಯಾಬಿನೆಟ್‌ವರೆಗೆ ಬಂದು ಒಂದು ವರ್ಷ ನಿಷ್ಕರ್ಶೆ ಆಗಿ ಕೊನೆಗೆ ಇತ್ಯರ್ಥವಾಗಿದೆ.

5.40 ಪಿಎಂ

ಈ ರೀತಿ ಜಾಯಿಂಟ್ ವೆಂಚರ್‌ನಲ್ಲಿ ಇದನ್ನು ನಡೆಸತಕ್ಕಂಥದ್ದು ಆಗಿದೆ. ಅಪೋಲೋರವರ ಹತ್ತಿರ ಅವರು ಏಕೆ ಹೆಚ್ಚು ಮಾರ್ಕ್ಸ್ ತೆಗೆದುಕೊಂಡರು. They have given marks. ಏಕೆ ಹೆಚ್ಚು ಮಾರ್ಕ್ಸ್ ತೆಗೆದುಕೊಂಡರು. because they have got the expertise and experience of having run 42 hi-tech hospitals not only in India, but also abroad. They have run hitech hospital even in a village and almost all the hospitals are being run successfully. Because they run 42 hitech hospitals, they have a vast pool of expers and frequently and periodically they can spare experts fro Hyderabad and Chennai for this Apollo Hospital. That is the reason why we have given to them. This is No.1 No.2, if any poor patient requires super-speciality treatment, at the cost of the institution the patient will be taken to Hyderabad and he will be operated there without costing the patient, a single pie. It is the responsibility of the institution. That care the government has taken.

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಉಪಾಧ್ಯಕ್ಷರೆ, ಅಪೋಲೋ ಹಾಸ್ಪೆಟಲ್ ವಿಚಾರವಾಗಿ...

ಉಪಾಧ್ಯಕ್ಷರು: ಕ್ಲಾರಿಫಿಕೇಶನ್ ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಹಂಪನಗೌಡ ಬಾದರ್ಲಿ: ನಾನು ಕ್ಲಾರಿಫಿಕೇಶನನ್ನೇ ಕೇಳುವುದು.

ಉಪಾಧ್ಯಕ್ಷರು: ಕೇಳಿ. ಆದರೆ ಮೊದಲು ಅವರು ಮಾತನಾಡಿ ಮುಗಿಸಲಿ. ನಿಮಗೂ ಅವಕಾಶ ಸಿಗುತ್ತದೆ. ಆದರೆ ಅವರು ಮಾತನಾಡುವಾಗ ಮಧ್ಯೆ ಯಾರೂ ಅಬ್‌ಸ್ಟ್ರಕ್ಟ್ ಮಾಡಬೇಡಿ. ನೀವು ಮುಂದುವರೆಸಿ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಕೆ.ಎಂ.ಸಿ. ಕಾಲೇಜ್ ಯಾವುದು ಇದೆ, ವೆನ್‌ಲಾಕ್ ಹಾಸ್ಪೇಟಲ್ Lady Ghoshan hospital ಸುಮಾರು 700 ಬೆಡ್ಡೆಡ್ ಸರ್ಕಾರಿ ಆಸ್ಪತ್ರೆಯ ಪೂರ್ತಿ ಉಪಯೋಗವನ್ನು ಅವರು ಮಾಡಿ ಕೊಳ್ಳುತ್ತಿದ್ದಾರೆ. ಕ್ಲಿನಿಕಲ್ ಫೀಸ್‌ನ್ನು ಕೊಡುತ್ತಿದ್ದಾರೆ. ಈ ರೀತಿಯ ಕಾರ್ಯವ್ಯಾಪ್ತಿಯ ಚೌಕಟ್ಟಿನಲ್ಲಿ ಬರುವುದರಿಂದ ಸಹಭಾಗಿತ್ವ ಎಂದು ಹೇಳಿ ಅಥವಾ ಯಾವುದೇ ರೀತಿಯಲ್ಲಿ ನೀವು ಹೇಳಿ, ಇಂಥ ಸಂದರ್ಭದಲ್ಲಿ ಅಲ್ಲಿ ಸಿ.ಇ.ಟಿ. ಪ್ರಕ್ರಾರ ಇನ್‌ಸಿಸ್ಟ್ ಮಾಡುವುದಕ್ಕೆ ನಿಮಗೆ ಏನು ತೊಂದರೆ ಬರುತ್ತದೆ? ಅವರು ನಮ್ಮ ಆಸ್ಪತ್ರೆಗಳನ್ನು ಉಪಯೋಗ ಮಾಡಿಕೊಳ್ಳುತ್ತಿರುವಂಥ ಸಂದರ್ಭದಲ್ಲಿ ಸಿ.ಇ.ಟಿ. ಅಪ್ಲಿಕಬಲ್ ಅವರಿಗೆ ಮಾಡುವುದಕ್ಕೆ ಏನು ತೊಂದರೆ ಎಂಬುದೇ ನಮ್ಮ ಮೂಲ ಪ್ರಶ್ನೆಯಾಗಿದೆ. ನೀವು ಉಪಯೋಗ ಮಾಡಬಾರದು ಎಂದು ಹೇಳುವಂಥದ್ದಲ್ಲ.

ಡಾ: ಜಿ. ಪರಮೇಶ್ವರ್: ಮೂಲವಾಗಿ ಪ್ರಾರಂಭ ಆಗಿದ್ದೇ ಅಲ್ಲಿಂದ. ಈ ಇಡೀ ಸಮಸ್ಯೆ ಉದ್ಭವ ಆಗಿದ್ದೇ ಅಲ್ಲಿಂದ. ಅದಕ್ಕೋಸ್ಕರ ಅದು ಅಲ್ಲಿಗಿದೆ. ಮಾನ್ಯ ಸಿಂಧ್ಯಾರವರೆ, ನೀವು ಹೇಳಿದಿರಿ ಈ ಸಿ.ಇ.ಟಿ. ಬಗ್ಗೆ ಅನೌನ್ಸ್ ಮಾಡುತ್ತಲೇ ಹೋಗಿದ್ದೇನೆ ಎಂದು ಹೇಳಿದಿರಿ. ಬರೀ ಸರ್ಕಾರಕ್ಕೆ ಮಾತ್ರ ನಾನು ಎಲ್ಲಿಯೂ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮುಗುಮ್ ಆಗಿ ಇದ್ದಿರಿ.

ಡಾ: ಜಿ. ಪರಮೇಶ್ವರ್: ಮುಗುಮ್ ಆಗೇನೂ ಇಲ್ಲ. ಎಲ್ಲರಿಗೂ ಅನ್ನತಕ್ಕಂಥ ಭಾವನೆ, ಎಲ್ಲಾ ಖಾಸಗಿ ಸಂಸ್ಥೆಯವರಿಗೆ ಮತ್ತು ಸರ್ಕಾರಕ್ಕೆ. ಏಕೆಂದರೆ ನಾವೆಲ್ಲಾ ಕೂಡ ಇನ್ನೂ ನಮ್ಮ ರೂಲ್ಸ್ ಅನೌನ್ಸ್ ಮಾಡಲಿಲ್ಲ. ಏನಪ್ಪಾ ಸರ್ಕಾರಕ್ಕೆ ಮಾತ್ರ ಮಾಡಿದ್ದಾರೆ, ಖಾಸಗಿಯವರನ್ನು ಬಿಟ್ಟುಬಿಟ್ಟಿದ್ದಾರೆ ಎಂದು ಹೇಳುವುದಕ್ಕೆ. ಏಕೆಂದರೆ ನಾವು ಇವೊತ್ತು ಏನೇ ಮಾಡಿದರೂ ಕೂಡ, ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶ ಹೊರಟರೆ it should stand the test of law. ಇದಕ್ಕೋಸ್ಕರ ನಾವು ಸ್ವಲ್ಪ ವಿಚಾರ ಮಾಡಿ, ಅವರನ್ನು ಕೇಳಿ, ಇವರನ್ನು ಕೇಳಿ, ಎಕ್ಸ್‌ಪರ್ಟ್ಸ್‌ಗಳನ್ನು ಕೇಳಿ, ತಮ್ಮನ್ನೆಲ್ಲರನ್ನೂ ಕೂಡ ಕೇಳಿ ಅದನ್ನು ಮಾಡುವುದಕ್ಕೆ ಸ್ವಲ್ಪ ವಿಳಂಬವಾಗಿದೆಯೇ ಹೊರತು ಬೇರೇನೂ ಇಲ್ಲ. ಇಷ್ಟಾದರೂ ಕೂಡ we are within the limits of CET process.

ಶ್ರೀ ಬಿ. ಸೋಮಶೇಖರ್: ನಮ್ಮನ್ನು ಕೇಳಿದ್ದರಿಂದ ವಿಳಂಬ ಆಗಿಲ್ಲ.

ಡಾ: ಜಿ. ಪರಮೇಶ್ವರ್: ಅಲಲ್ಲ. ನಿಮ್ಮಿಂದ ಅಲ್ಲ. ಎಲ್ಲಾ ಬೇರೆಯವರನ್ನೂ ಮತ್ತು ನಿಮ್ಮನ್ನೂ ಸೇರಿಸಿಕೊಂಡೆ ಅಷ್ಟೆ. ಸಲಹೆ ಕೊಟ್ಟಿದ್ದಕ್ಕೆ ಸೇರಿಸಿಕೊಳ್ಳಬೇಡವೆ ಸಾರ್ ಆದರೆ ನಿಮ್ಮಿಂದ ವಿಳಂಬವಾಯಿತು ಎಂದು ನಾನು ಹೇಳಲಿಲ್ಲ.

ಶ್ರೀ ಎಂ. ರಾಮದಾಸ್: ಮಾನ್ಯ ಸಿಂಧ್ಯಾರವರ ಪ್ರಶ್ನೆಗೆ ತಾವು ಕ್ಲಾರಿಫಿಕೇಷನ್ ಕೊಡುವಾಗ ಎಲ್ಲಿಯೂ ಕೂಡ ಆ ಮಾತನ್ನು ಹೇಳಲಿಲ್ಲ ಎನ್ನುವಂಥ ಮಾತನ್ನು ತಾವು ಈಗ ಹೇಳಿದ್ದೀರಿ. ಒಂದು ನಿಮಿಷ ತಾವು ಈಲ್ಡ್ ಆದರೆ ಅದರ ಬಗ್ಗೆ ಹೇಳುತ್ತೇನೆ. ತಾವು ಒಂದು ವಿಚಾರವನ್ನು ಹೇಳಿದಿರಿ. ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪಿಸಿಕೊಳ್ಳಬೇಕು. ತೀರ್ಪಿನಿಂದ ಮೆರಿಟ್‌ಗೆ ಸ್ಥಾನವೇ ಇಲ್ಲದಂತಾಗಿದೆ ಎಂದು ಡಾ: ಪರಮೇಶ್ವರ್‌ರವರು ವಿಷಾದಿಸಿದರು ಮತ್ತು ಸಿ.ಇ.ಟಿ. ಎಂಬುದು ಸರ್ಕಾರ ಮತ್ತು ಅನುದಾನಿತ ಕಾಲೇಜುಗಳಿಗೆ ಮಾತ್ರ ಉಳಿಯುತ್ತದೆ ಎಂದು ಸಚಿವರು ತಿಳಿಸಿದರು ಎಂದು ತಾವು ಕೊಟ್ಟಂಥ ಸ್ಟೇಟ್‌ಮೆಂಟ್‌ನಲ್ಲಿದೆ. ಅದು ನನ್ನ ಬಳಿ ಈಗ ಇದೆ. ಆದರೆ ಇಲ್ಲಿ ತಾವು ನಾನು ಎಲ್ಲೂ ಆ ರೀತಿಯಲ್ಲಿ ಹೇಳಿಯೇ ಇಲ್ಲವೆಂದು ಹೇಳುತ್ತೀರಿ.

ಡಾ:ಜಿ. ಪರಮೇಶ್ವರ್: ನಿನ್ನೆ ಕೂಡ ತಾವು ಈ ಮಾತನ್ನು ಪ್ರಸ್ತಾಪ ಮಾಡಿದಿರಿ. ನಾನು ಅದಕ್ಕೆ ಕ್ಲಾರಿಫಿಕೇಶನ್ ಕೊಟ್ಟೆ. ಇದನ್ನು ಹೇಳಿರುವುದು ಸುಪ್ರೀಂಕೋರ್ಟಿನ ಆದೇಶ ಬಂದ ಮಾರನೇ ದಿವಸ ಅಥವಾ ಎರಡ್ಮೂರು ದಿವಸಗಳಲ್ಲಿ ಬಹುಶ: ಹೇಳಿರುವುದು. ನೀವು ಡೇಟ್ ಹೇಳಿ. ನಾನು ಇಲ್ಲೋ ಎಲ್ಲೋ ಇದ್ದೇನೆ, ಪಿ.ಇ.ಎಸ್. ಕಾಲೇಜ್‌ನಲ್ಲಿ I remember it verywell-. ನಾನು ಹೇಳಿದ್ದು ಈ ಸುಪ್ರೀಂಕೋರ್ಟಿನ ಜಡ್ಜ್‌ಮೆಂಟ್ ಇವೊತ್ತು ಏನಿದೆ ಅದು ಇಷ್ಟಕ್ಕೇ ಸೀಮಿತವಾಗತಕ್ಕಂಥದ್ದು ಇದೆ. ಅದಕ್ಕೆ ನಾನು ವಿಷಾದ ವ್ಯಕ್ತಪಡಿಸಿದ್ದೇನೆ. It

is not my decision or the decision of the government. ನಾನು ಏನು ಹೇಳಿದ್ದು ಎಂದರೆ ಸುಪ್ರೀಂ ಸುಪ್ರೀಂಕೋರ್ಟಿನ ಇವೊತ್ತು ಬಂದಿರತಕ್ಕಂಥ ಆದೇಶ ಸೀಮಿತವಾಗತಕ್ಕಂಥದ್ದು ಇದೆ. ಆದ್ದರಿಂದಾಗಿ ಇದಕ್ಕೆ ಸಾರ್ವಜನಿಕ ಅಭಿಪ್ರಾಯ ರೂಢಿಯಾಗಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದೆ. But it depends how we interprets. That is the clarification. ನಿನ್ನೆ ದಿವಸ ಡೆಕ್ಕನ್ ಹೆರಾಲ್ಡ್‌ನಲ್ಲಿ ಕರ್ನಾಟಕ ಅನ್-ಏಡೆಡ್ ಕಾಲೇಜ್‌ಗಳ ಅಸೋಸಿಯೇಶನ್‌ನ ಅಧ್ಯಕ್ಷರು ಒಂದು ಜಾಹಿರಾತನ್ನು ಕೊಟ್ಟಿದ್ದಾರೆ. ಸ್ವಾಮಿ, ಅವರೇನೂ ನಮ್ಮನ್ನು ಈ ಬಗ್ಗೆ ಕೇಳಲಿಲ್ಲ ಅಥವಾ ನಾವು ಅವರಿಗೆ ಜಾಹಿರಾತು ಕೊಡಿ ಎಂದು ನಾವೇನೂ ಹೇಳಲಿಲ್ಲ. ಅದಕ್ಕೂ ನಮಗೂ ಯಾವ ಸಂಬಂಧಾನೂ ಇಲ್ಲ. ನಾವು ಇವೊತ್ತು ಮುಂದೆ ಬರತಕ್ಕಂಥ ನಿಯಮಗಳ ಬಗ್ಗೆ ಏನು ಸರ್ಕಾರಿ ಆದೇಶವನ್ನು ಹೊರಡಿಸುತ್ತೇವೆ ಅದೇ ಈ ರಾಜ್ಯದ ವೃತ್ತಿ ಶಿಕ್ಷಣಕ್ಕೆ ಆಗತಕ್ಕಂಥ ನಿಯಮ ಮತ್ತು ನೀತಿ. ಆದ್ದರಿಂದ ಅವರೇನೂ ಜಾಹಿರಾತು ಹಾಕಿಕೊಂಡಿದ್ದಾರೆ ಅದು ಅವರಿಗೆ ಸೇರಿರತಕ್ಕಂಥದ್ದು. It has no relevance as far as the government is conerned.

ಶ್ರೀ ಎ. ರಾಮದಾಸ್: ಈ ವಿಚಾರದಲ್ಲಿ ಬಹಳ ಸ್ಪಷ್ಟವಾದ ಉತ್ತರ ತಮ್ಮಿಂದ ಬರಬೇಕು. ಎಲ್ಲಾ ವೃತ್ತಿಪರ ಸಂಸ್ಥೆಗಳಿಗೂ ಕೂಡ ಅದರ ಸಂಪೂರ್ಣವಾದ ಸ್ವಾಯತ್ತತೆ ಅವುಗಳಿಗೇ ಇದ್ದರೂ ಕೂಡ ಆಗುಹೋಗುಗಳೇನಿವೆ ಅದರ ಪರಿಣಾಮ ಜನ ಸಮಾನ್ಯರ ಮೇಲೆ ಬೀರುತ್ತಿರುವುದರಿಂದ ಅದರ ನಿಯಂತ್ರಣ ಮಾಡಬೇಕು. ಅದನ್ನು ಬಿಟ್ಟು ಅವರು ಯಾವುದೇ ಜಾಹಿರಾತನ್ನು ಕೊಟ್ಟುಕೊಳ್ಳಬಹುದು, ನಮಗೂ ಅದಕ್ಕೂ ಸಂಬಂಧವಿಲ್ಲವೆನ್ನುವುದಲ್ಲ. ಆ ಜಾಹಿರಾತನ್ನು ಕೊಡುವ ಮೂಲಕವಾಗಿ ಯಾವುದೇ ರೀತಿಯ ಅಡ್ಮಿಶನ್ ಆಗಲಿ, ಇನ್ನೊಂದು ಆಗಲಿ, ಮತ್ತೊಂದಾಗಲಿ ಏನೇ ಆದರೂ ಕೂಡ ಅದು ನ್ಯಾಯಾಲಯಗಳಲ್ಲಿ ಬಹಳಷ್ಟು ಕೇಸ್‌ಗಳಲ್ಲಿ ಇತರ ಸಮಸ್ಯೆಗಳು ನಿರ್ಮಾಣವಾಗಿವೆ. ಆದುದರಿಂದ ಸರ್ಕಾರ ಸ್ಪಷ್ಟವಾದಂಥ ನಿಲುವನ್ನು ಹೇಳಬೇಕು. ಈ ರೀತಿಯ ಜಾಹಿರಾತನ್ನು ಕೊಡುವುದು ಸರಿಯಲ್ಲ ಎನ್ನುವಂಥದ್ದನ್ನು ಸರ್ಕಾರ ಸ್ಪಷ್ಟವಾಗಿ ಹೇಳಬೇಕು.

ಡಾ:ಜಿ. ಪರಮೇಶ್ವರ್: ಜಾಹಿರಾತು ಕೊಡುವುದಕ್ಕೆ ಅವರಿಗೆ ಮುಕ್ತ ಅವಕಾಶ ಇದೆ. ಅವರು ಕೊಟ್ಟುಕೊಳ್ಳಲಿ, ನಮಗೇನೂ ಅದರಿಂದ ತೊಂದರೆ ಇಲ್ಲ. ಆದರೆ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ನಾವು ಸಿ.ಇ.ಟಿ. ಮೂಲಕ ಪರೀಕ್ಷೆ ಮಾಡಿ ತೀರ್ಮಾನ ಮಾಡಿ ಮುಂದಿನ ದಿನಗಳಲ್ಲಿ ಕಳುಹಿಸತಕ್ಕಂಥ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. We will try to ensure them by bringing an order or by bringing whatever rules necessary, we will ensure that. ಏಕೆಂದರೆ ಟ್ರೈ ಸುರೇಶ್‌ಕುಮಾರ್ ಹೇಳ್ತಾರೆ, ಇನ್ನೂ ಟ್ರೈನಲ್ಲಿಯೇ ಇದ್ದೀರಿ ಎಂದು ಹೇಳುತ್ತಾರೆ. ಆದ್ದರಿಂದ we will definitely ensure to protect the interests of the students of our State. ಆದುದರಿಂದ ಈ ಬಗ್ಗೆ ಯಾವುದೇ ರೀತಿಯ ಅನುಮಾನ ಬೇಡ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವೊತ್ತು ಬೆಳಿಗ್ಗೆ 9.30 ಗಂಟೆಗೆ ಸರ್ವಪಕ್ಷಗಳ ಸಭೆ ಕರೆದಿದ್ದಾಗ ಅನೇಕ ಸೂಕ್ತ ಸಲಹೆಗಳನ್ನು ಏನು ಕೊಡಲಾಗಿದೆ ಅವೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಏಕೆಂದರೆ ಸಂಪುಟದಲ್ಲೂ ಕೂಡ ಇದು

ತೀರ್ಮಾನವಾಗಬೇಕಾಗುತ್ತದೆ. ಆದ್ದುದರಿಂದ ಇಲ್ಲಿ ಸಬ್ಸಿಡಿಯ ಕಾಂಪೊನೆಂಟ್ ಬರಬಹುದು ಫೀಸ್ ಸ್ಟ್ರಕ್ಚರ್‌ನ್ನು ಮಾಡತಕ್ಕಂಥ ಸಂದರ್ಭದಲ್ಲಿ. ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ನಾವು ಅಂತಿಮವಾಗಿ ತೀರ್ಮಾನವನ್ನು ಈ ವಾರದಲ್ಲಿ ಅಥವಾ ಮುಂದಿನ ವಾರದ ಮೊದಲ ಒಂದೆರಡೂರು ದಿವಸದಲ್ಲಿ ಹೊರಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ: ಹೈದ್ರಾಬಾದ್-ಕರ್ನಾಟಕದ ವಿದ್ಯಾರ್ಥಿಗಳು ಹಿತದೃಷ್ಟಿಯನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಅವರಿಗೆ ಅನ್ಯಾಯವಾಗಬಾರದು.

ಡಾ:ಜಿ. ಪರಮೇಶ್ವರ್: ಅದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಉತ್ತೇವೆ. ರೂಲ್ಸ್ ಮಾಡುವಂಥ ಸಂದರ್ಭದಲ್ಲಿ ಕನ್ನಡ ಮಾಧ್ಯಮದಲ್ಲಿ ಒಂದರಿಂದ ಹತ್ತನೇ ತರಗತಿವರಗೆ ಓದಿದವರಿಗೆ ಪ್ರಪ್ರಥಮ ಬಾರಿಗೆ 5 ಪರ್ಸೆಂಟ್ ರಿಸರ್ವೇಶನ್ ನಾವು ಮಾಡಿದ್ದೇವೆ. ಹೊರನಾಡ ಕನ್ನಡಿಗರಿಗೆ, ಎನ್.ಸಿ.ಸಿ. ಯವರಿಗೆ, ಎನ್.ಎಸ್.ಎಸ್.ನವರಿಗೆ, ಹೀಗೆ ಆ ರೀತಿಯಲ್ಲಿ ಡಿಫರೆಂಟ್ ಕ್ಯಾಟಗರಿವೈಸ್ ಮಾಡತಕ್ಕಂಥ ಸಂದರ್ಭದಲ್ಲಿ We will definitely ಅದನ್ನು ಪರಿಶೀಲನೆ ಮಾಡುತ್ತೇವೆ. ಏಕೆಂದರೆ ಎಷ್ಟು ಜನ ಆ ಭಾಗದ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಅವರಲ್ಲಿ ಹೈದ್ರಾಬಾದ್-ಕರ್ನಾಟಕ ಇರಬಹುದು, ಬಾಂಬೆ-ಕರ್ನಾಟಕ ಇರಹಬುದು, ಉತ್ತರ ಕರ್ನಾಟಕ ಎಷ್ಟು ಜನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ನಮ್ಮ ಸಿ.ಇ.ಟಿ.ಯಲ್ಲಿ ಪರೀಕ್ಷೆ ತೆಗೆದುಕೊಂಡಿದ್ದಾರೆ, ಎಷ್ಟು ಜನರಿಗೆ ಸೀಟ್ ಸಿಕ್ಕಿದೆ, ಅವೆಲ್ಲವನ್ನೂ ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಮಾಡಿದ ಮೇಲೆ ಅದಕ್ಕೆ ಅವಶ್ಯಕತೆ ಇತ್ತು ಅಂತ ಹೇಳಿದರೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಹೇಳಬಯಸುತ್ತೇನೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಮಾನ್ಯ ಉಪಾಧ್ಯಕ್ಷರೆ, ಒಂದು ಕ್ಲಾರಿಫೀಕೇಶನ್ ಕೇಳಬಯಸುತ್ತೇನೆ. ಮಾನ್ಯ ಸಚಿವರು ಮ್ಯಾನೇಜ್‌ಮೆಂಟ್‌ನವರನ್ನು ಕರೆದು ಅವರ ಜೊತೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ತಾವು ಆಪ್‌ಶನ್ ಕೇಳಿದ್ದೀರಿ ಎನ್ನತಕ್ಕಂಥದ್ದು ಇದೆ, ನೀವು ಪ್ರೈವೇಟೈಸ್ ಮಾಡ್ತೀರಾ? ಪ್ರೈವೇಟೈಸೇಶನ್‌ಗೆ ಹೋಗ್ತೀರಾ ಅಥವಾ ಸರ್ಕಾರದ ಜೊತೆ ಬರ್‍ತೀರಾ ಎನ್ನತಕ್ಕಂಥ ಮಾತನ್ನು ನೀವು ಕೇಳಿದ್ದೀರಿ ಎನ್ನತಕ್ಕಂಥ ಮಾತುಗಳು ಕೇಳಿಬರುತ್ತಿರುವುದರಿಂದ ತಾವೇನಾದರೂ ಆ ರೀತಿ ಅವರನ್ನು ಕೇಳಿದಿರಾ ಎಂಬ ಬಗ್ಗೆ ತಾವು ಕ್ಲಾರಿಫೈ ಮಾಡಬೇಕು.

ಡಾ: ಜಿ. ಪರಮೇಶ್ವರ್: ನಾನು ಹೇಳಿದ್ದು ಏನೆಂದರೆ, ಸುಪ್ರೀಂ ಕೋರ್ಟ್‌ನ ತೀರ್ಪನ್ನು ವಿಮರ್ಶೆ ಮಾಡುವಾಗ ಅವರ ಅಭಿಪ್ರಾಯಗಳನ್ನು ಕೆಳುವುದಕ್ಕೆ ಕರೆದಿದ್ದೇ ವಿನ: ಎಷ್ಟು ಪರ್ಸೆಂಟೇಜ್ ಕೊಡುತ್ತೀರಿ ಎಷ್ಟು ಫೀಜ್ ತೆಗೆದುಕೊಳ್ಳುತ್ತೀರಿ ಇದೆಲ್ಲಾವನ್ನು ಕೂಡ ನಾವು ಹೇಳಲಿಲ್ಲ. ಅವರೂ ಕೂಡ ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮುಂದೆ ಒಂದು ಪ್ರಸೆಂಟೇಷನ್ ಮಾಡಿದರು. ಎಷ್ಟು ಜನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುತ್ತೇವೆ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂದು ಹಾಗೂ ಇನ್ನಿತರ ವಿಷಯಗಳನ್ನು ಸಹ ಅಲ್ಲಿಗೆ ಬಂದಿದಂತಹ 300ರಿಂದ 400 ಜನ ಎಂದರೆ ಎಲ್ಲಾ ಇಂಜಿನಿಯರಿಂಗ್, ಮೆಡಿಕಲ್ ಬಿ.ಇಡಿ, ಎಂಬಿಎ, ಎಂಸಿಎ ಅವರೆಲ್ಲರನ್ನು ಕರೆಸಿದ್ದಾಗ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಅಷ್ಟೆ.

ಶ್ರೀ ಬಿ. ಸೋಮಶೇಖರ್: ನಾವು ಇಷ್ಟೆಲ್ಲಾ ಗಂಟೆಗಟ್ಟಲೆ ಮಾನ್ಯ ಸುರೇಶ್‌ಕುಮಾರ್ ಹಾಗೂ ನಮ್ಮ ಪಾರ್ಟಿಯಿಂದ ಅನೇಕ ಸದಸ್ಯರುಗಳೆಲ್ಲಾ ವಿಚಾರಗಳನ್ನು ಚರ್ಚೆ ಮಾಡಿದರೂ

ಕೂಡ ಅದಕ್ಕೆ ಸ್ಪಷ್ಟವಾಂತಹ ನಿಲುವನ್ನು ತಾವು ಕೊಡದೆ, ಬೆಳಿಗ್ಗೆ ಮೀಟಿಂಗ್ ಕರೆದಿದ್ದಾಗ ಆ ಮೀಟಿಂಗ್‌ನಲ್ಲಿ ಕೂಡ ನಾವು ಹೇಳಿದ್ದೇವೆ. ಆದರೆ ಇವತ್ತು ನೀವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರೆ ನನಗೇನೋ ಆತಂಕವಾಗುತ್ತಿದೆ. ಇವತ್ತು ಮ್ಯಾನೇಜ್‌ಮೆಂಟ್‌ನವರಿಂದ ನಿಮಗೆ ಬಹಳ ಒತ್ತಡ ಇದೆ ಎಂದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಇಲ್ಲವೆಂದರೆ ತಾವು ಹೇಳುತ್ತಿದ್ದಿರಿ, ಎಲ್ಲಾ ಒಪ್ಪಿಕೊಂಡಿದ್ದೇವೆ, ಈ ವ್ಯವಸ್ಥೆ ಬಹಳ ಚೆನ್ನಾಗೆ ನಡೆದುಕೊಂಡು ಬರುತ್ತಿದೆ, ಅಬಾಲಿಷನ್ ಆಫ್ ಕ್ಯಾಪಿಟೇಷನ್ ಆ್ಯಕ್ಟ್ ಪ್ರಕಾರ ಮತ್ತು ಎಜುಕೇಷನ್ ಆ್ಯಕ್ಟ್ ಪ್ರಕಾರ ಈ ಆಧಾರದ ಮೇಲೆ ನಾವೇನು ರೂಲ್ಸ್ ಮಾಡಿದ್ದೆವು, ಅದರ ಪ್ರಕಾರ ಮಾಡುತ್ತೇವೆಂದು ತಾವು ಏನೊಂದು ಸರಿಯಾದ ತೀರ್ಮಾನವನ್ನು ಹೇಳಿಲ್ಲ, 97ರ ರೂಲ್ಸ್ ಏನಿದೆ ಅದನ್ನು ನಾವು ಬದಿಗೊತ್ತುವುದಿಲ್ಲ ನಮ್ಮ ಸರ್ಕಾರ ಮಾಡಿರುವುದನ್ನು ಅಷ್ಟೇ ರೀತಿಯಲ್ಲಿ ರಕ್ಷಣೆ ಕೊಡುತ್ತೇವೆಂದು ಹೇಳಿಲ್ಲ. ಮತ್ತೆ ಇನ್ನೊಂದು "Advertisement." Who are they to advertise our seats? This the problem they have not confined to their own saeats. The Government should come out and say, Yes it is illegal, we have not authorised anybody. You have to decide these are our seats and these are their seats. ಅದು ಇನ್ನೂ ಆಗಿಲ್ಲ, ಅದು ಇನ್ನೂ ಆಗಿದೆ ನಮ್ಮ ಸೀಟಿಗೆ ಅವರು ಅಡ್ವಟೈಸ್‌ಮೆಂಟ್ ಹಾಕಿಕೊಂಡಿದ್ದಾರೆ.

ಡಾ: ಜಿ. ಪರಮೇಶ್ವರ್: ನಾನು ಹೇಳಿದ್ದೇನೆ, ಯಾವ ಮುಲಾಜಿಗೂ ಒಳಗಾಗಿಲ್ಲ, ಯಾರ ಒತ್ತಡ ಕೂಡ ನಮ್ಮ ಮೇಲೆ ಇಲ್ಲ. Let me make it very clear again and again. ಯಾರೇ ಆಗಲಿ ನಮಗೆ ಪ್ರೆಷರ್ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಸರ್ಕಾರವನ್ನು ಪ್ರೆಷರ್ ಮಾಡತಕ್ಕಂಥ ಶಕ್ತಿ ಅವರಿಗೆ ಯಾರಿಗೂ ಇಲ್ಲ. We will not yield also. ಆದುದರಿಂದ ಅದರ ಬಗ್ಗೆ ತಮಗೆ ಅನುಮಾನ ಖಂಡಿತವಾಗಿ ಬೇಡ. 1997ರ ರೂಲ್ಸ್ ಏನಿದೆ, ಅದನ್ನು ಇವತ್ತಿನ ಸುಪ್ರೀಂ ಕೋರ್ಟ್‌ನ ಆದೇಶದ ತೀರ್ಪಿನ ಹಿನ್ನೆಲೆಯಲ್ಲಿ ರೂಲ್ಸ್ 2003 ಈಗ ಮಾಡುತ್ತೇವೆ. We will amend those rules to protect the interests of our students. 1997 Rules as it is ಇಡುವುದಕ್ಕೆ ಬರುವುದಿಲ್ಲ. We will have to go back to Unnikrishnan Judgement. It is unconstitutional. We cannot keep that 1997 ruls. We have to amend the rules to protect the interests of our students. ಇದನ್ನು ಖಂಡಿತವಾಗಿ ನಾವು ಮಾಡುತ್ತೇವೆ ಇದರಲ್ಲಿ ಯಾವುದೇ ಅನುಮಾನ ಇಲ್ಲ.

**SRI B. SOMASHEKAR:** How the 1983 Education Act is illegal? How the Abolition of Capitation Fee Act is illegal?

**SRI G.PARAMESHWAR:** How can I say?

**SRI B. SOMASHEKAR:** 1983 Education Act, the Abolition of Capitation Fees Act, still prevail. According to that, we will not sacrifice the interest of students ಎಂದು ಹೇಳಿ ಮತ್ತೆ 97 ರಲ್ಲಿ ಹೇಗೆ ಇತ್ತು ಅದನ್ನು ಹಾಗೆ ಇಡಬೇಕಾದ್ದಿಲ್ಲ. ಆದರೆ 97ರ ರೂಲ್ಸ್ ಪ್ರಕಾರ ವಿದ್ಯಾರ್ಥಿಗಳಿಗೆ ಯಾವ್ಯಾವ ಸವಲತ್ತುಗಳು ಬರುತ್ತಿದ್ದವು, ಅದನ್ನು ನಾವು ಸ್ಯಾಕ್ರಿಫೈಸ್ ಮಾಡುವುದಿಲ್ಲವೆಂದು ಹೇಳಿದಿರಿ. ನೀವು ಯಾವ

ರೀತಿಯಲ್ಲಾದರೂ ತನ್ನಿ, ಬೇಕಾದರೆ, ಅದನ್ನು ರಿಪ್ಲೇಸ್ ಮಾಡಿ, ಚಿಂತೆ ಇಲ್ಲ. ಆದರೆ ಅಷ್ಟೇ ವಿದ್ಯಾರ್ಥಿಗಳಿಗೆ ನಾವು ಅಷ್ಟೇ ರಕ್ಷಣೆ ಕೊಡುತ್ತೇವೆ ಎಂದು ಹೇಳಬೇಕು. ಮತ್ತೆ ಮೊನ್ನೆ ಇಶ್ಯೂ ಮಾಡಿದ್ದಾರಲ್ಲಾ, ಅದು ಇಲ್ಲೀಗಲ್ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದೆ ಇದ್ದರೆ ರಾಜ್ಯದ ಜನತೆಗೆ ಸಂದೇಶ ಹೋಗುತ್ತದೆ.

ಶ್ರೀ ಎ. ರಾಮದಾಸ್: ಮಾನ್ಯ ಉಪಾಧ್ಯಕ್ಷರೆ, ನನಗೆ ಅಲ್ಲಿಂದ ಇಲ್ಲಿಗೆ ಬರುವ ಮಧ್ಯದಲ್ಲಿ ಏಕೆ ಅಡತಡೆಗಳು ಎಂದು ಅನ್ನಿಸುತ್ತಿದೆ. ಅಲ್ಲಿ ಬಹಳ ಚೆನ್ನಾಗಿ ಮೀಟಿಂಗ್ ಆಯಿತು. ನಾವು ಅಲ್ಲಿ ಮುಗಿಸಿ ಹೊರಗೆ ಬಂದಾಗ ಮಾಧ್ಯಮದವರು ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿದರು. ನಿಮ್ಮ ಪಕ್ಷದ ನಿಲುವೇನು? ನಿಮ್ಮ ಪಕ್ಷ ಏನು ಹೇಳಿದರು? ಅದಕ್ಕೆಲ್ಲಾ ನಾವು ಒಂದು ವಿಚಾರ ಹೇಳಿದ್ದೇನೆಂದರೆ it is the property of the House. ಅದರ ಜೊತೆಗೆ ನಮ್ಮ ಪಕ್ಷದ ನಿಲುವೇನಲ್ಲ, ಸರ್ಕಾರ ತೆಗೆದುಕೊಳ್ಳುವ ಎಲ್ಲಾ ನಿರ್ಣಯಗಳಿಗೆ ಸಂಪೂರ್ಣವಾದ ಸಹಕಾರವನ್ನು ವಿರೋದ ಪಕ್ಷದವರು ಕೊಡುತ್ತೇವೆಂದು ಹೇಳಿದ್ದೇವೆ. ಹಾಗೂ ಪ್ರತ್ಯೇಕವಾದಂತಹ ಸ್ಟೇಟ್‌ಮೆಂಟ್ ಇಲ್ಲವೆಂದು ಹೇಳಿದ್ದೇವೆ. ವಿದ್ಯಾರ್ಥಿಗಳ ಪರವಾಗಿ ಯಾವುದೇ ರೀತಿಯ ನಿರ್ಧಾರ ತೆಗೆದುಕೊಂಡರೂ ಕೂಡ ಅದರ ಪರವಾಗಿ ಇದ್ದೇವೆ ಎಂದು ಹೇಳಿ ಬಂದಿದ್ದೇವೆ. ಅಲ್ಲಿ ಚರ್ಚೆ ಮಾಡಿದಂತಹ ವಿಷಯಗಳಲ್ಲಿ ಪ್ರಮುಖವಾಗಿ ಒಂದು ವಿಚಾರವನ್ನು ಎಕ್ಸ್‌ಪೆಕ್ಟ್ ಮಾಡಿದ್ದೆ. ತಾವು ಯಾರ ಜೊತೆಯಲ್ಲಾದರೂ ಅದು ಮುಖ್ಯ ಮಂತ್ರಿಗಳಿರಬಹುದು ಚರ್ಚೆ ಮಾಡಿಕೊಂಡು ಆದರೂ ಬರಲಿ ಎಂದು ಅವಕಾಶ ಕೊಟ್ಟು, ತಾವು ಸಂಜೆಯೊಳಗೆ ತಮ್ಮಿಂದ ಏನು ಎಕ್ಸ್‌ಪೆಕ್ಟ್ ಮಾಡಿದ್ದೆವು ಎಂದರೆ ಆಂಧ್ರಪ್ರದೇಶದಲ್ಲಿ ಮಾಡಿರುವ ಹಾಗೆ ಬೇರೆ ಬೇರೆ ರಾಜ್ಯಗಳಲ್ಲಿ ಅನುಸರಿಸುತ್ತಿರುವಂತಹ ರೀತಿಯಲ್ಲಿ CET is mandatory for all the seats. ಇವತ್ತು ಏನು ನಮ್ಮ ಮುಂದೆ ಇದೆ, ಎಲ್ಲಾ ಸೀಟುಗಳು ಕೂಡ ಸಿಇಟಿ ಮೂಲಕ ಆಗುತ್ತದೆ ಎನ್ನುವಂತಾದ್ದು ಸರ್ಕಾರದ ಘೋಷಣೆಯಾಗಬೇಕು, ಇದು ಮೊದಲನೆಯದು. ಇನ್ನು ಎರಡನೆಯದು ಎಲ್ಲಾ ವಿಚಾರಗಳ ಬಗ್ಗೆ ಅಲ್ಲಿ ಚರ್ಚೆಯಾಯಿತು. ಅಲ್ಲಿ ಲಾ ಸೆಕ್ರೆಟರಿ ಕೂಡ ಬಹಳ ಮುಖ್ಯವಾದಂತಹ ವಿಚಾರವನ್ನು ಹೇಳಿದರು. ಅಲ್ಲಿರುವಂತಹ ಪ್ಯಾರಾ 68 ಮತ್ತು 69ರ ಪ್ರಕಾರದಲ್ಲಿ ಇವತ್ತು ಸರ್ಕಾರಕ್ಕೆ ಎಲ್ಲಾ ಅಧಿಕಾರಗಳು ಇದೆ. ಅಧಿಕಾರ ಇರುವುದರಿಂದ ಈ ಎರಡೂ ಆ್ಯಕ್ಟ್ ತಮ್ಮ ಮುಂದೆ ಇರುವುದರಿಂದ ಕೇವಲ ರೂಲ್ಸ್ ಫ್ರೇಮ್ ಮಾಡಬೇಕು. ಅದನ್ನು ನಾವು ಫ್ರೇಮ್ ಮಾಡುತ್ತೇವೆ ಎಂದು ಹೇಳಿದಿರಿ. ಯಾವತ್ತು ಅದನ್ನು ಮಾಡುತ್ತೀರಿ? ಇನ್ನು ಸಿಇಟಿ ಮ್ಯಾಂಡೇಟರಿ ಎಂದು ಹೇಳುವಂತಾದ್ದು. ಆಗಬೇಕು. ಇನ್ನು ಮೂರನೆಯದಾಗಿ ಫೀಜ್ ಸ್ಟ್ರಕ್ಚರ್. ನಾವು ಬಹಳ ಮುಖ್ಯವಾದ ಅಂಶವನ್ನು ನಿಮ್ಮಿಂದ ಎಕ್ಸ್‌ಪೆಕ್ಟ್ ಮಾಡುತ್ತಿದ್ದೆ. ಏಕೆ ಎಂದರೆ ಅಲ್ಲಿಂದ ಬರುವಾಗ ನೀವು ಇನ್‌ಫ್ಲೂಯೆನ್ಸ್ ಆಗಿಲ್ಲ ಎಂದು ಹೇಳಿದಿರಿ. ಇನ್‌ಫ್ಲೂಯೆನ್ಸ್ ಆಗಿಲ್ಲ ಎನ್ನುವುದಾದರೆ ತಾವು ಬಹಳ ಎಕ್ಸ್‌ಪರ್ಟ್ಸ್ ಇರುವಂತಹ ಒಂದು ಸಮಿತಿಯನ್ನು ಅನೌನ್ಸ್ ಮಾಡುತ್ತೇವೆಂದು ಹೇಳಿದಿರಿ. ಅದನ್ನು ನಾನು ಎಕ್ಸ್‌ಪೆಕ್ಟ್ ಮಾಡಿದ್ದೆ. ಅಲ್ಲಿ ಅಂತಹ ಎಕ್ಸ್‌ಪರ್ಟ್ ಇರುವವರನ್ನು ವೈಜ್ಞಾನಿಕವಾಗಿ ಒಂದು ವ್ಯವಸ್ಥೆಗಳನ್ನು ಮಾಡುವುದಕ್ಕೋಸ್ಕರ ಕೊಡುತ್ತೇವೆಂದು ಹೇಳಿದಿರಿ. ಅದರ ಬಗ್ಗೆ ಇಲ್ಲಿ ಯಾವುದೂ ಉತ್ತರ ಇಲ್ಲ ಎಂದರೆ ಅಲ್ಲಿಂದ ಇಲ್ಲಿಗೆ ಬರುವವರೆಗೆ ಯಾವ ಅಡತಡೆಗಳು ಇದೆ ಎಂದು ನಮ್ಮೆಲ್ಲರಿಗೂ ಭಯ ಬರುತ್ತಿದೆ. ಅಲ್ಲಿಂದ ಇಲ್ಲಿಗೆ ಬರುವವರೆಗೆ ಅಡೆತಡೆಗಳು ಆದರೆ ಹೊರಗಡೆ ಹೋಗುವಷ್ಟರಿಗೆ ಇನ್ನು ಎಷ್ಟು ಆಗುತ್ತದೆ ಎಂಬುದನ್ನು ದಯವಿಟ್ಟು ತಾವು ಹೇಳಬೇಕು.

ಡಾ: ಜಿ. ಪರಮೇಶ್ವರ್: ಗೌರವಾನ್ವಿತ ಸದಸ್ಯರಾದ ರಾಮದಾಸ್‌ರವರೆ, ಮೂರನೆ ಮಹಡಿಯಿಂದ ಇಲ್ಲಿಗೆ ಬರುವಷ್ಟೊತ್ತಿಗೆ ಏನೂ ಬದಲಾವಣೆಯಾಗಿಲ್ಲ. ಆದರೆ ನಾಳೆ ಸಂಪುಟದ ಸಭೆ ಇದೆ. ತಾವು ಕೊಟ್ಟಂತಹ ಸಲಹೆಗಳನ್ನೆಲ್ಲಾ ತೆಗೆದುಕೊಂಡು ಸಂಪುಟದ ಮುಂದೆ ಇಟ್ಟು ಚರ್ಚೆ ಮಾಡಿ ಅದರ ಬಗ್ಗೆ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದು ನಂತರ ಅನೌನ್ಸ್ ಮಾಡುಬೇಕೆನ್ನುವ ಉದ್ದೇಶ ಬಿಟ್ಟರೆ ಏನೂ ಇಲ್ಲ. ನಾಳೆ ಸಂಪುಟದ ತೀರ್ಮಾನವಾದರೆ ನಾಳೇನೆ ಅನೌನ್ಸ್ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಈ ಮಾತನ್ನು ನೀವು ಎರಡು ತಿಂಗಳಿಂದ ಹೇಳಿಕೊಂಡೆ ಬರುತ್ತಿದ್ದೀರಿ; ನಾಳೆ ತೀರ್ಮಾನ ಮಾಡುತ್ತೇವೆಂದು. ಎರಡು ದಿವಸದಿಂದ ಸಿಇಟಿ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ವಿಧಾನಪರಿಷತ್ತಿನಲ್ಲಿ ಚರ್ಚೆ ಮುಗಿದಿದೆ. ಮತ್ತೊಂದು ಸಲ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ಒಂದು ಸಲ ಅವಕಾಶ ಕೊಟ್ಟು ಚರ್ಚೆಯಾದ ಮೇಲೆ ಚರ್ಚೆಯಾಗಿದೆ ಹೋಗಿ ಎಂದು ಹೇಳುತ್ತೀರಿ. ಇವತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ತಮಗೆ ಮಾತನಾಡುವುದಕ್ಕೆ ಅವಕಾಶ ಇತ್ತು. ನಮ್ಮ ಪಕ್ಷದ ವತಿಯಿಂದ ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಪರಮೋಚ್ಚ ಅಧಿಕಾರವನ್ನು ಸರ್ಕಾರದ ಇಟ್ಟುಕೊಳ್ಳಬೇಕೆಂದು ನಾನು ಹೇಳಿದ್ದೇನೆ, whether it is government seat, aided-institutions seat or private college seat. ಲಾಸ್ಟ್ ಇಯರ್ ಸಿಇಟಿಯಲ್ಲಿ ಆಗಿರತಕ್ಕಂಥ ಟಿಸಿಹೆಚ್ ಅಡ್ಮಿಷನ್, ಬಿ,ಇಡಿ ಅಡ್ಮಿಷನ್, ಎಂಜಿನಿಯರಿಂಗ್ ಅಡ್ಮಿಷನ್, ಎಂಬಿಎ ಅಡ್ಮಿಷನ್, ಎಂಬಿಬಿಎಸ್, ಮೆಡಿಕಲ್‌ನಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಅಡ್ಮಿಷನ್ ಇವಿಷ್ಟು ಸೀಟುಗಳಿಗೂ ಸಹ ಪರಮೋಚ್ಚ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳುವುದಕ್ಕೆ ಇರತಕ್ಕಂಥ ಅಧಿಕಾರವನ್ನು ಕಳೆದುಕೊಂಡಿದ್ದೀರಿ. ಅದಕ್ಕೆ ಒಂದು ಅಧಿಕಾರ ಇಟ್ಟುಕೊಳ್ಳುವುದಕ್ಕೆ ಕಾನೂನನ್ನು ಮಾಡಿ ಕೊಳ್ಳಬೇಕೆಂದು ಹೇಳಿದಾಗ, ಇನ್‌ಪ್ರಿನ್ಸಿಪಲ್ ನಾವು ಆ ಕಾನೂನು ಮಾಡಿಕೊಳ್ಳುತ್ತೇವೆಂದು ಹೇಳಿ. ನೀವು ಅಪೀಲು ಹೋಗುವುದಿಲ್ಲ, ಕಾನೂನು ಮಾಡಿಕೊಳ್ಳುವುದಿಲ್ಲ ಎಂದರೆ again you are appeasing private managements only. ಮಾನ್ಯ ರಾಮದಾಸ್ ಏನು ಹೇಳಿದ್ದಾರೆ ಅದರಲ್ಲಿ ಹುರುಳು ಇದೆ. You are influenced by them. It is very difficult in this government. ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೂ, ಗೌವರ್ನ್‌ಮೆಂಟ್‌ಗೂ ಒಂದು ರೀತಿಯಲ್ಲಿ ಕೂದಲು ಎಳೆಯಷ್ಟು ವ್ಯತ್ಯಾಸ ಇದೆ. ಅದರಿಂದಾಗಿ ನಾವು ಪ್ರೆಶರ್‌ಗೆ ಯೀಲ್ಡ್ ಆಗಿಲ್ಲ ಎಂದರೆ ನೀವೇ ಆ ಪ್ರೆಷರ್ ಹಾಕುತ್ತಿರತಕ್ಕಂಥಾವರು.

ಡಾ: ಜಿ. ಪರಮೇಶ್ವರ್: 97ರ ರೂಲ್ಸ್ ಅನ್ನುಅಮೆಂಡ್‌ಮೆಂಟ್ ಮಾಡಿ 2003ಗೆ ರೂಲ್ಸ್ ಮಾಡುತ್ತೇವೆಂದು ಹೇಳಿದ್ದೇನೆ. ಈಗ ನಾವು ಯಾವುದನ್ನೂ ಬದಲಾವಣೆ ಮಾಡಿಕೊಂಡಿಲ್ಲ. 97ರಲ್ಲಿ ಉನ್ನಿಕೃಷ್ಣನ್ ಜಡ್ಜ್‌ಮೆಂಟ್‌ನ ಆಧಾರದ ಮೇಲೆ ಮಾಡಿರುವುದು. ಆದರೆ 2003 ರ ರೂಲ್ಸ್ ಅನ್ನು ಈಗಿನ ಸುಪ್ರೀಂಕೋರ್ಟ್‌ನ ಆದೇಶದ ಮೇಲೆ ಮಾಡುವುದು. ಅದರಲ್ಲಿ ಇದೆಲ್ಲವನ್ನೂ ಕೂಡ ರಕ್ಷಣ ಮಾಡುತ್ತೇವೆ ಎನ್ನುವ ಮಾತು ಹೇಳುತ್ತೇನೆ. We will go at any cost, we will amend the rules and we will come out with the rules. ಯಾವುದೇ ಕಾರಣಕ್ಕೂ ಅದರಲ್ಲಿ ಬದಲಾವಣೆ ಇಲ್ಲ. In principle, we agree

we, will come out with the rules. ಏಕೆ ನಾನು ಹೇಳಿದೆ ಎಂದರೆ ಇದು ಸಂಪುಟದ ಮುಂದೆ ಹೋಗಬೇಕಾಗುತ್ತದೆ. ಇದು ಪಾಲಿಸಿ ಡಿಸಿಷನ್ ಆಗಿರುವುದರಿಂದ, ಆ ಕಾರಣಕ್ಕೆ ಹೇಳಿದೆನೇ ಹೊರತು, ಯಾವುದೇ ರೀತಿಯ ಬದಲಾವಣೆ ಇಲ್ಲವೆಂದು ಹೇಳುತ್ತೇನೆ. ಇನ್ನು ಫೀಜ್ ಸ್ಟ್ರಕ್ಚರ್ ಬಗ್ಗೆ ಹೇಳುವುದಾದರೆ ಮಾನ್ಯ ರಾಮದಾಸ್ ರವರು ಹೇಳಿದ ಹಾಗೆ, ಆ ವಿಚಾರದಲ್ಲಿ ಡಾ: ಚಂದ್ರಶೇಖರ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಈಗಾಗಲೇ ಒಂದು ಜಿ.ಓ. ಇಶ್ಯೂ ಆಗಿದೆ. ಸರ್ಕಾರಿ ಆದೇಶವನ್ನು ಮಾಡಿದ್ದು, ಅವರು ಮೂರ್‍ನಾಲ್ಕು ದಿವಸದಲ್ಲಿ ಫೀಜ್ ಸ್ಟ್ರಕ್ಚರ್ ಮಾಡಿ, ಎಲ್ಲಾ ತಜ್ಞರ ಸಲಹೆಗಳನ್ನು ತೆಗೆದುಕೊಂಡು ಕೊಡಬೇಕೆಂದು ಒಂದು ಸರ್ಕಾರಿ ಆಜ್ಞೆಯನ್ನು ಮಾಡಿದ್ದೇವೆ. ಈಗ ಹೊರಡಿಸಿದೆ, ಅದರ ಕಾಪಿಯನ್ನು ಕಳುಹಿಸಿಕೊಡುತ್ತೇನೆ.

**ಡಾ: ಎ.ಬಿ. ಮಾಲಕರೆಡ್ಡಿ:** ಮಾನ್ಯ ಉಪಾಧ್ಯಕ್ಷರೇ, ಡಾ।। ಚಂದ್ರಶೇಖರ ಶೆಟ್ಟಿಯವರು ಮಾಜಿ ಉಪ ಕುಲಪತಿಗಳು, Present Vice-Chancellor is also there, Medical Education Secretary is there, Director of Medical Education is there Principal Dr. Nagalothi mutt is there, Dr. Kanta is there, Director of Indian system of Medicine or Dr. Guruswamy is there. Likewise, we have taken representatives.

**ಶ್ರೀ ಎಸ್. ಸುರೇಶ್ ಕುಮಾರ್:** ಮಾನ್ಯ ಉಪಾಧ್ಯಕ್ಷರೇ, ಈಗ ಡಾ:ಜಿ.ಪರಮೇಶ್ವರ್ ರವರು ಏನು ಉತ್ತರವನ್ನು ಕೊಟ್ಟರು, ಅದನ್ನೆಲ್ಲಾ ತಾಳ್ಮೆಯಿಂದ ಕೇಳಿದ್ದೇವೆ. ಡಾ:ಜಿ. ಪರಮೇಶ್ವರ್ ರವರ ಸರ್ಕಾರೀ ಉತ್ತರಕ್ಕೆ, ಪಕ್ಕದಲ್ಲೇ ಶ್ರೀ ಸೀತಾರಾಂರವರು ಕುಳಿತುಕೊಂಡು, ಅವರಿಗೆ ಸಹಕಾರವನ್ನು ಕೊಡುತ್ತಿರುವುದೇ, ಸರ್ಕಾರ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆ. ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ, ಈಗ ಏಪ್ರಿಲ್ 3ನೇ ತಾರೀಖಿನಿಂದ ಸೆಕೆಂಡ್ ಪಿ.ಯು.ಸಿ. ಪರೀಕ್ಷೆ ಇದೆ, ಇನ್ನು 20 ದಿವಸಗಳು ಇವೆ. ಇವತ್ತಿಗೂ ಕೂಡ ಈ ಸೆಕೆಂಡ್ ಪಿ.ಯು.ಸಿ.ಗೆ ಹೋಗುವ ಹುಡುಗರು ಕಂಗಾಲಾಗಿದ್ದಾರೆ. ನಿಜವಾಗಿಯೂ they are really tensed. ಅವರಿಗೆ ಎಕ್ಸಾಮ್ ಫೇಸ್ ಮಾಡುವಂಥಾದ್ದು ಸುಲಭ, ಆದರೆ ಸರ್ಕಾರದ ನಿಜವಾದ ಮುಖವನ್ನು ಅರಿಯುವುದು ಬಹಳ ಕಷ್ಟವಾಗಿದೆ. ಅವರು ಎರಡನೇ ಪಿ.ಯು.ಸಿಯನ್ನು ಚೆನ್ನಾಗಿ ಮಾಡಿದರೂ ಕೂಡ, ಮೇ 30 ಕ್ಕೆ ಸಿಇಟಿ ಎಕ್ಸಾಮ್‌ಗೆ ಆಗಿ ಹೋದರೂ ಕೂಡ ನಮಗೆ ಏನಾದರೂ ಭವಿಷ್ಯವಿದೆಯೋ, ಎಂಬುದು ನಿಜವಾದ ಪರಿಸ್ಥಿತಿ ಇದೆ. ನಾವು ಅವರ ಜಾಗದಲ್ಲಿದ್ದು ಯೋಚನೆ ಮಾಡೋಣ, ಇನ್ನು 20ದಿವಸಗಳಿಗೆ ಅವರಿಗೆ ಪರೀಕ್ಷೆ ಇದೆ, ಇವತ್ತು ಅವರು ಯಾವ ರೀತಿ ಇರಬಹುದು? ಇಂತಹ ಸಮಯದಲ್ಲೂ ಸರ್ಕಾರದಿಂದ ಏನು ಕ್ಯಾಟಿಗಾರಿಕಲ್ ಅಶೂರನ್ಸ್ ಬರಬೇಕಾಗಿತ್ತೋ, ಅದು ಇವತ್ತು ಬಂದಿಲ್ಲ. ಮಾನ್ಯ ಬಿ. ಸೋಮಶೇಖರ್‌ರವರು ಬಹಳ ಚೆನ್ನಾಗಿ ಹೇಳಿದರು. I fully endorse Mr. Somashekar's view. ನೀವು ಒಂದು ವಿಷಯವನ್ನು ಹೇಳಬಹುದಾಗಿತ್ತು. The State is Supreme. ಈ ರಾಜ್ಯದಲ್ಲಿ ಸಿ.ಇ.ಟಿ. ರೂಲ್ಸ್ ಇರುವಾಗ , ಈ ರಾಜ್ಯದಲ್ಲಿ ವ್ಯವಸ್ಥೆ ಇರುವಾಗ, ಯಾರೋ ಒಬ್ಬರು ಪ್ರೈವೇಟ್ ಮೇಡಿಕಲ್ ಕಾಲೇಜ್ ಮ್ಯಾನೇಜ್‌ಮೆಂಟ್ ಹೆಸರಿನಲ್ಲಿ ಅಡ್ವರಟೈಜ್‌ಮೆಂಟ್ ಕೊಡುವುದು, ಬರೀ ತಪ್ಪಲ್ಲ, ಅದು ಇಲ್ಲೀಗಲ್ಲು, ಅಪರಾಧವೆಂದು, ಒಂದು ಹೇಳಿಕೆಯನ್ನು ಕೊಟ್ಟಿದ್ದಿದ್ದರೆ, ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ, ಟೈಮ್ ಆಫ್

ಇಂಡಿಯಾ, ಈ ಪತ್ರಿಕೆಗಳನ್ನು ಓದಿ, ಆ ಹುಡುಗರಿಗೆ ಧೈರ್ಯ ಬರುತ್ತಿತ್ತು; ಇಲ್ಲ ಸ್ಟೇಟ್ ಬಲವಾಗಿದೆ ಎಂದು ಅನ್ನಿಸುತ್ತಿತ್ತು. When you are asked to ben, you are crawling ನೀವು ಬೆಂಡ್ ಆಗಿ ಎಂದು ಹೇಳುತ್ತಾ ಇಲ್ಲ. ನಾಮ ಪ್ರೈವೇಜ್ ಮ್ಯಾನೆಜ್‌ಮೆಂಟ್‌ಗೆ ಬಗ್ಗುವುದಿಲ್ಲವೆಂಬ ಇದುವರಿಗೆ ಕ್ಯಾಟಗರಿಕಲ್ ಅಶೂರೆನ್ಸ್ ಕೊಟ್ಟಿಲ್ಲ. ಈಗ ತಾವು ನಮಗೆ ಹೇಳುತ್ತಾ ಇದ್ದೀರಿ, ಮುರ್‍ನಾಲ್ಕು ವಿಚಾರಗಳನ್ನು ಹೇಳಿದ್ದೀರಿ, ಸಿ.ಇ.ಟಿ. ಪರೀಕ್ಷೆ ರೂಲ್ಸ್ ಪ್ರಕಾರ ನೆಡೆಯುತ್ತದೆಂದು ಹೇಳಿದ್ದೀರಿ; ಈ ಕ್ಯಾಟಗರೀಕಲ್ ಆಶೂರ್‌ನ್ಸ್ ಇಡೀ ಸ್ಟೇಟ್‌ಗೆ ಕೇಳುವಂತಹ ರೀತಿಯಲ್ಲಿ ಸರ್ಕಾರ ವರ್ತಿಸುತ್ತಿಲ್ಲ. ಇನ್ನು ಮುರನೆಯದಾಗಿ ಡಾ:ಜಿ. ಪರಮೇಶ್ವರ್ ರವರು, ಶ್ರೀ ಎಂ.ಆರ್. ಸೀತಾರಾಂರವರು, ಇನ್ನು ಯಾರ‍್ಯಾರು ಆಡಳಿತ ಪಕ್ಷದವರು ಇದ್ದಾರೆ, ಅವರಾದರೂ ಕ್ಯಾಟಗರಿಕಲ್ ಆಗಿ ಹೇಳಬಹುದಾಗಿತ್ತು. ನಾವು ಸುಪ್ರೀಂ ಕೋರ್ಟಿನ ತೀರ್ಪಿನ ಗೊಂದಲದ ಲಾಭವನ್ನು ತೆಗೆದುಕೊಳ್ಳುವುದಿಲ್ಲ, ಈ ಲಾಭವನ್ನು ರಾಜ್ಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ಪ್ರತಿಭೆ ಇರುವಂಥವರಿಗೆ, ಸಾಮಾಜಿಕ ನ್ಯಾಯುವನ್ನು ಕೊಡುವುದಕ್ಕೋಸ್ಕರವಾಗಿ ನಾವಿದ್ದೇವೆಂದು, ಅದನ್ನು ನಾವು ಪ್ರತಿಬಿಂಬಿಸುತ್ತೇವೆಂದು ಹೇಳಬಹುದಾಗಿತ್ತು. Even in that you are not forthcoming. ಈ ದೃಷ್ಟಿಯಿಂದ ಈ 48ಗಂಟೆಗಳ ಕಾಲ ನಡೆದಿರುವಂಥಾದ್ದು, ಇದನ್ನು ಇನ್ನೊಂದು ಪ್ರಹಸನವೆಂದು ಹೇಳಿದರೆ, ತಪ್ಪಾಗಲಾರದು. ನಾವು ಇಲ್ಲಿ ಏನು ಸ್ಕೋರಿಂಗ್‌ಗೆ ಎಂದು, ಡಿಬೇಟಿಂಗ್ ಪಾಯಿಂಟ್ ಗೋಸ್ಕರ ನಾವು ಮಾಡುತ್ತಿಲ್ಲ. ನಿಮಗಿಂತ ನಾವು ಚೆನ್ನಾಗಿ ಮಾಡುತ್ತೇವೆ, ಎಂಬುದಕ್ಕೆ ಅಲ್ಲ. ನಾನು ಮೊದಲೇ ಹೇಳಿದ್ದೆನೆಂದರೆ ಈ ಸದನದಿಂದ ಇಡೀ ರಾಜ್ಯಕ್ಕೆ ವಿಶ್ವಾಸದಿಂದ ಕೂಡಿರುವಂತಹ ಸಂದೇಶ ಹೋಗಬೇಕೆಂದು ಹೇಳಿದೆ. ಈ ಸದನ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಜೊತೆಗೆ ಇದೆ, ನಾವು ಈ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಬಗ್ಗುವುದಿಲ್ಲ, ರಾಜ್ಯ ನಿಮ್ಮ ಜೊತೆಗೆ ಇದೆ ಎಂದು ಸಂದೇಶ ಹೋಗಬೇಕಾಗಿತ್ತು. ಅದನ್ನು ಕೊಡುವುದರಲ್ಲಿ ನೀವು ವಿಫಲರಾಗಿದ್ದೀರಿ, ಈಗಲೂ ಕೂಡ ಕ್ಯಾಬಿನೆಟ್ ಮೀಟಿಂಗ್, ಸಮಿತಿ ಎಂದು ಹೇಳುತ್ತಿದ್ದೀರಿ, ನೀವು ನವೆಂಬರ್ 22ನೇ ತಾರೀಖಿನಂದು ಏನು ಹೇಳಿದ್ದೀರಿ, ಅದನ್ನೇ ಮಾರ್ಚ್ 12ನೇ ತಾರೀಖಿಗೂ ಹೇಳುತ್ತಿದ್ದೀರಿ. ಇನ್ನು ವಾರದಲ್ಲಿ ಇತ್ಯರ್ಥವಾಗುತ್ತದೆ, ಇನ್ನು 10 ದಿವಸಗಳಲ್ಲಿ ಇತ್ಯರ್ಥವಾಗುತ್ತದೆ, ಎಂದು ಹೇಳುತ್ತಿದ್ದೀರಿ, ಇದರಲ್ಲಿ ಯಾರಿಗೆ ವಿಶ್ವಾಸ ಬರುತ್ತದೆ? ಪ್ರಾಯಶ: The management mentally in the Government ಅದು ಸರ್ಕಾರಕ್ಕೆ ಈ ವಿದ್ಯಾರ್ಥಿಗಳ ಕಡೆಗೆ ಸರಿಯಾಗಿ ವರ್ತಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ; ಆ ಒಂದು ನಿರ್ಧಾರಕ್ಕೆ ನಾವು ಬರಬೇಕಾಗುತ್ತದೆ. Which is unfortunate. ಇವತ್ತು ಒಬ್ಬ ವಿದ್ಯಾರ್ಥಿ ನನಗೆ ಪತ್ರವನ್ನು ಬರೆದಿರುವಂಥಾದ್ದನ್ನು ಮಾನ್ಯ ಪಿ.ಜಿ.ಆರ್. ಸಿಂಧ್ಯರವರಿಗೆ ತೋರಿಸಿದೆ. ಅವನು ಈ ರೀತಿ ಫೀ ಸ್ಟ್ರಕ್ಚರ್ ಇದ್ದರೆ, ನಾವು ಓದುವುದಕ್ಕೆ ಆಗುತ್ತದೆಯೇ ಎಂದು ಕಳಕಳಿಯಿಂದ ಕೇಳಿಕೊಂಡಿದ್ದಾನೆ. ಈ ಫೀಸ್ ಸ್ಟ್ರಕ್ಚರ್ ಬಗ್ಗೆ ನಮಗೇ ಒಂದು ಕನ್ಸಫ್ಯೂಷ್ ಇಲ್ಲ, ನಾವು ಏನು ಮಾಡುತ್ತೇವೆ ನಾಳೆ ಅಂತ. ಒಟ್ಟಿನಲ್ಲಿ ಡಾ: ಎ.ಬಿ. ಮಾಲಕರೆಡ್ಡಿಯವರು, ಅಪೋಲೋ ಆಸ್ಪತ್ರೆಯ ಬಗ್ಗೆ ಪ್ರಸ್ತಾಪವಾದಾಗ "ಚರ್ವಿತ ಚರ್ವಾಣ" ಎಂದು ಡಿಬೇಟ್ ಮಾಡಿ ಎಂದು ಏನೋ ಹೇಳಿದರು, ಚರ್ಚೆ ಮಾಡಿ ಎಂದರು ಹಾಗೆ ಇದು ಕೂಡ "ಚರ್ವಿತ ಚರ್ವಾಣ" ವಾಗುತ್ತದೆ. ಈಗಲಾದರೂ ತಾವು ಇಲ್ಲಿ ಎಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು, ಮಾನ್ಯ ಕರಿಯಣ್ಣನವರು ನಮ್ಮ ವಾದಕ್ಕೆ

ಬಲಕೊಟ್ಟಿರುವಂಥವರು, ಧೈರ್ಯ ಬಂದಿರುವಂಥಾದ್ದು, ಇಲ್ಲಿ ಕೇವಲ ವಿರೋಧಪಕ್ಷದವರು ಮಾತ್ರವಲ್ಲ, ನಾವೂ ಕೂಡ ಇದ್ದೇವೆಂದು, ರಾಜ್ಯ ಸರ್ಕಾರ ಹೇಗೆ ವರ್ತಿಸಬೇಕೆಂಬ ಮಾರ್ಗದರ್ಶನದ ಮಾತುಗಳನ್ನು ಅವರು ಹೇಳಿದ್ದಾರೆ. ಈಗಲಾದರೂ ಸ[illegible]ನದ ಭಾವನೆಗಳನ್ನು ಅರ್ಥಮಾಡಿಕೊಂಡು ಸರ್ಕಾರ ರಾಜ್ಯದ ವಿದ್ಯಾರ್ಥಿಗಳಿಗೆ, ವಿಶ್ವಾಸ ಕೊಡುವ[illegible]ತಹ ಹೇಳಿಕೆಯನ್ನು ಹೊರಡಿಸಬೇಕು, ಪೋಸ್ಟ್ ಫೋನ್ ಮೆಂಟಾಲಿಟಿ, ಮತ್ತೆ "ಚುಸ್ತಾಮು ಚೇಸ[illegible]ತಾಮ್" ಎನ್ನುವಂತೆ ಅದು ಸರ್ಕಾರದಿಂದ ಆಗಬಾರದೆಂದು ನಾನು ಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಉಪಾಧ್ಯಕ್ಷರೇ, ನ[illegible]ನಂತೂ ಇವತ್ತು ಡಾ:ಜಿ. ಪರಮೇಶ್ವರ್‌ರವರನ್ನು ಅಭಿನಂದಿಸಬೇಕೆಂದು ಬೆಳಿಗ್ಗೆಯಿಂದಲೇ ಕಾಯ[illegible]ತ್ತಿದ್ದೇನೆ. ಆದರೆ ಇವರ ಉತ್ತರವನ್ನು ನೋಡಿದರೆ, ನಾವು ನಿನ್ನೆಯ ದಿವಸ ಮಾತನಾಡಿದ್ದೇವೆ, ಇವ[illegible]ತ್ತು ವಿದ್ಯಾರ್ಥಿಗಳ ಹಾಗೂ ಪೋಷಕರ ಕೂಗು ಇವರಿಗೆ ತಲುಪಿದೆ, ಅದಕ್ಕೋಸ್ಕರ ಇವರು ವಿರೋಧಪಕ್ಷದ ಮುಖಂಡರುಗಳ ಸಭೆಯನ್ನು ಕರೆದು ಅವರ ಸಲಹೆಗಳನ್ನು ಒಪ್ಪಿದ್ದೇನೆಂಬುದನ್ನು ಏನೂ ಸದನಕ್ಕೆ ಹೇಳಿಲ್ಲ. ಈ ಸಭೆಯಲ್ಲಿ ಏನು ತೀರ್ಮಾನವಾಗಿದೆ, ಎಂಬುದು ಸದನಕ್ಕೆ ಗೆ[illegible]ತ್ತಿಲ್ಲ. ಆದರೆ ಒಂದು ವಿಚಾರವನ್ನು ಹೇಳಬೇಕೆಂದರೆ ಶ್ರೀ ಎಸ್.ಸುರೇಶ್ ಕುಮಾರ್, ಮಾನ್ಯ ಬಿ.[illegible]ೋಮಶೇಖರ್ ರವರು ಹೇಳಿದರೆ, ಈ ಸಿ.ಇ.ಟಿ. ಪರೀಕ್ಷೆಯನ್ನು ಸರ್ಕಾರ ಮಾಡುವುದು ಮಾ[illegible]ವೇ, ಅಥವಾ ಕಾಲೇಜ್‌ನವರು ಸಪರೇಟ್ ಅಡ್‌ಮಿಷನ್ ಟೆಸ್ಟ್ ಮಾಡುತ್ತಾರಾ? ಒಂದು ವೇಳೆ ಇವರು ಪರೀಕ್ಷೆಯನ್ನು ಮಾಡಿದರೆ, ಮಕ್ಕಳು ಸರ್ಕಾರ ಮಾಡುವಂತಹ ಪರೀಕ್ಷೆಗೆ ಮಾತ್ರ ಅಪೀಯರ್ ಆದರೆ ಸರ್ಕಾಗುತ್ತದೆಯೇ, ಅಥವಾ ಪ್ರೈವೇಟ್‌ನವರು ಮಾಡುವಂತಹ ಪರೀಕ್ಷೆಗೂ ಅಪೀಯರ್ ಆಗಬೇಕಾ ಬೇಡವಾ, ಎಂಬ ಬಗ್ಗೆ ಕ್ಲಾರಿಫೈ ಮಾಡಬೇಕು. ಒಂದು ವೇಳೆ ಒ[illegible]ದೇ ಸಿಇಟಿ ಪರೀಕ್ಷೆ ಎಂದು ಆದೆ, ಮಕ್ಕಳಿಗೆ ಪಿ.ಯು.ಸಿ. ಪರೀಕ್ಷೆಗೆ ಹೋಗುವುದಕ್ಕೆ ರಿಲೀಫ್ ಸಿಗುತ್ತದೆ; ಇಲ್ಲದಿದ್ದರೆ ಇವರು ಎರಡು, ಮೂರು ಪರೀಕ್ಷೆಗಳಿಗೆ ಅಪೀಯರ್ ಆಗಬೇಕೆಂಬ ದುಮ್ಮಾನ ಮನಸ್ಸಿನಲ್ಲಿದ್ದರೆ, ಅವರು ಪಿ.ಯು.ಸಿ. ಪರೀಕ್ಷೆಯನ್ನು ಸರಿಯಾಗಿ ಬರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಲ್ಲಾ ಕಾಲೇಜುಗಳಿಂದ ಅಪ್ಲಿಕೇಷನ್ ತರುವಂಥಾದ್ದು, ಹಾಕುವಂಥಾದ್ದು, ಇದೇ ಕೆಲಸವಾಗುತ್ತದೆ; ಅದಕ್ಕೋಸ್ಕರ ಸರ್ಕಾರ ಮಾತ್ರ ಸಿ.ಇ.ಟಿ. ಟೆಸ್ಟ್ ಮಾಡುತ್ತಾದಾ? ಒಂದು ವೇಳೆ ಬೇರೆಯವರು ಟೆಸ್ಟ್ ಮಾಡಿದರೆ ಅಪೀಯರ್ ಆಗಬೇಕಾ ಬೇಡವಾ? ಎಂಬುದು, ಮತ್ತು ಫೀಸ್ ಸ್ಟ್ರಕ್ಚರ್ ಬಗ್ಗೆ ಸರ್ಕಾರ ಕ್ಲಾರಿಫಿಕೇಷನ್ ಕೊಡಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕೆ.ಜಯಪ್ರಕಾಶ್ ಹೆಗಡೆಯವರು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ, ನಾನೂ ಕೂಡ ಡಾ:ಜಿ. ಪರಮೇಶ್ವರ್‌ರವರನ್ನು ಅಭಿನಂದನೆ ಮಾಡಬೇಕೆಂದು ಇದ್ದೆ; ನಾವು ಅಭಿನಂದನೆಯನ್ನು ಯಾವಾಗ ಮಾಡಬಹುದು ಅಂದರೆ ನೀವು ಒಂದು ಸಿಂಹಗರ್ಜನೆ ಏನು ಮಾಡುತ್ತೇನೆ ಎಂಬ ಬಗ್ಗೆ, ಮಾಡಿದಿದ್ದರೆ ನಾವು ಮಾಡಬಹುದಾಗಿತ್ತು, ಇಲ್ಲಿ ಯಾರು ಲಾಯರ್‌ಗಳು ಆರ್ಗ್ಯೂ ಮಾಡಿದರೆಂಬ ಲಿಸ್ಟ್ ದೊಡ್ಡದು ಇದೆ, ಲಿಸ್ಟ್‌ಗಳು ಸುಪ್ರೀಂ ಕೋರ್ಟ್‌ನಲ್ಲಿ ಅಡ್ವೋಕೇಟ್ಸ್ ಆನ್ ರೇಕಾರ್ಡ್ ಎಲ್ಲಾ ಇದೆ, ಆದರೆ ಲಿಸ್ಟ್ ಅಲ್ಲ ಬೇಕಾಗಿರುವಂಥಾದ್ದು; ಇಲ್ಲಿ ಯಾರು ಆರ್ಗ್ಯೂ ಮಾಡಿದರೋ, ಇಲ್ಲವೊ, ಎಂಬುದು ಬೇಕಾಗಿರುವಂಥಾದ್ದು. ಎರಡನೆಯದಾಗಿ ಈಗಾಗಲೇ ಕೆಲವು ಪ್ರೈವೇಟ್ ಎಜ್ಯುಕೇಶನ್ ಇನ್ಸ್ಟಿಟ್ಯೂಶನ್‌ಗಳಲ್ಲಿ already they have deposited the amount in advance.

ಮಾನ್ಯ ಸೀತರಾಂರವರು ಮಾಡಿದ್ದಾರೋ ಇಲ್ಲವೊ, ಗೊತ್ತಿಲ್ಲ, ಆದರೆ ಅನೇಕ ಬೇರೆ ಇನ್ಸ್‌ಟ್ಯೂಶನ್‌ಗಳಲ್ಲಿ they have already collected the money. ಆಯಿತು, ತಾವು ನಾಳೆ ದಿವಸ ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ, ಆದು ಆದತಕ್ಷಣ ನೋಟಿಫಿಕೇಶನ್ ಇಶ್ಯೂ ಮಾಡುತ್ತೀರಿ, they will not go by your notification, because the Supreme Courts order is in their favour. ಅದುದರಿಂದ ನಿಮ್ಮ ನೈತಿಕ ಹೊಣೆ ನಾಳೆ ದಿವಸ what is your decision? ಆ ಒಂದು ಅಭಿನಂದನಾ ಕಾರ್ಯಕ್ರಮ ಏನು ಮಾಡುತ್ತೀರಿ, ಈಗ ಮಾನ್ಯ ಕೆ.ಜಯಪ್ರಕಾಶ ಹೆಗಡೆಯವರು ಹೇಳಿದರು, ಆ ಒಂದು ನೈತಿಕ ಹೊಣೆ ಹೊತ್ತು ರಿಸೈನ್ ಮಾಡುತ್ತಿರಾ? ಆ ಧೈರ್ಯದಲ್ಲಿ ಇದ್ದಿರಾ? ಆ ಧೈರ್ಯವಿದ್ದರೆ ಧೈರ್ಯವಾಗಿ ಹೇಳಿ, ಧೈರ್ಯವಾಗಿ ಹೇಳುವುದಾದರೆ ಹೇಳಿ, ನಾವು ನಿಜವಾಗಿ the entire House will congratulate. That is how you should express your concerned ಇಲ್ಲಿ ಈ ಒಂದು ಪೋರ್ಟ್ ಪೋಲಿಯೊ ಇರಲಿ, ಇಲ್ಲದೇ, ಹೋಗಲಿ ಏಕೆಂದರೆ The entire state will be very happy to know about it. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಅಗಲಿ, ಆಗದೇ ಹೋಗಲಿ, ಯಾವ ರೀತಿಯಾಗಿ ಸ್ಟೂಡೆಂಟ್‌ಗಳಿಗೆ ಹೆಲ್ಪ್ ಆಗುತ್ತದೆ, ಇದರಿಂದ ಆಗುವುದಾದರೆ I am ready to sacrifice my Minister post. ಅನ್ನುವಂತಹ ಧೈರ್ಯದಿಂದ ತಾವು ಹೇಳಿ.

6.10 ಪಿಎಂ

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಸಚಿವರಿಂದ ಈ ಸದನಕ್ಕೆ ಬೇಕಾಗಿರುವ ಒಂದು ಸ್ಪಷ್ಟನೆ ಏನೆಂದರೆ, ಅವರು, ನಾಳೆ ಈ ವಿಷಯವನ್ನು ಸಚಿವಸಂಪುಟದ ಸಭೆಯಲ್ಲಿ ಇಟ್ಟು ಸರ್ಕಾರದ ನೀತಿಯನ್ನು ಪ್ರಕಟಣೆ ಮಾಡುತ್ತೇವೆಂದು ಹೇಳಿದರು. ನಿಜವಾಗಿಯೂ ಖಾಸಗಿ ಕಾಲೇಜುಗಳ ಮಾಲೀಕರ ಹಿತ ಕಾಪಾಡುವಂಥ ಆಸಕ್ತಿ ಅವರಿಗಿಲ್ಲವೆನ್ನುವುದಾದರೆ, ನಿಜವಾಗಿಯೂ ಈ ರಾಜ್ಯದ ಬಡಮಕ್ಕಳ ಪ್ರತಿಭೆಯನ್ನು ಇನ್ನೊಂದಷ್ಟು ವಿಕಾಸ ಮಾಡುವುದಕ್ಕೆ ಆಸಕ್ತಿ ಇದೆ ಎನ್ನುವುದಾದರೆ ನಾಳೆ ಸಂಜೆಯೊಳಗೆ ಅವರು ಸಚಿವಸಂಪುಟದ ಸಭೆಯನ್ನು ನಡೆಸಿ ಪ್ರಕಟಣೆ ಮಾಡುತ್ತಾರೆಯೇ ಎನ್ನುವುದನ್ನು ಹೇಳಲಿ, ಈ ಚರ್ಚೆಯನ್ನೆ ಮುಂದಕ್ಕೆ ಹಾಕೋಣ, ತೊಂದರೆ ಏನೂ ಆಗುವುದಿಲ್ಲ, ನಾಳೆಯೇ ನಿರ್ಧಾರ ಮಾಡೋಣ; ನಾಳೆ ಸಂಜೆ ಅವರು ಪ್ರಕಟಣೆ ಮಾಡಲಿ, ಅವರಿಗೆ ನಾನು ಅಭಿನಂದನೆಯನ್ನು ಹೇಳಿ ಹೋಗೋಣ. ಇದಾಗ ಬೇಕಾಗುತ್ತದೆ ಇಲ್ಲದಿದ್ದರೆ, ಖಾಸಗಿ ಕಾಲೇಜುಗಳು ಏನಿದ್ದಾವೆ ಅವು ಬಾಲ ಇದ್ದ ಹಾಗೆ ಅವು ನಾಯಿಯನ್ನು ಅಲ್ಲಾಡಿಸಬಾರದು ಇಡೀ ರಾಜ್ಯದಲ್ಲಿರುವ ಬಡ ವಿದ್ಯಾರ್ಥಿಗಳು ಮಕ್ಕಳು ಏನಾಗುತ್ತದೆಂದು ನಿರೀಕ್ಷೆಯಲ್ಲಿದ್ದಾರೆ. ಕಳೆದು ಎರಡುಮೂರು ತಿಂಗಳಿಂದ ಈ ರೀತಿಯಾಗಿ ಮುಂದೂಡುತ್ತಾ ಬಂದು, ಇವತ್ತೂ ಕೂಡ ಮಕ್ಕಳಿಗೆ ಬಾಳೆಹಣ್ಣು ತೋರಿಸಿದಂತೆ ಈ ಸದನದಲ್ಲಿ ತೋರಿಸುವ ಅವಶ್ಯಕತೆಯಿಲ್ಲ. ಮಾನ್ಯ ಪರಮೇಶ್ವರ್‌ರವರಿಗೆ ನಮಗೆಲ್ಲರಿಗೂ ಗೌರವವಿದೆ, ಹಿಂದಿನ ಸಾರಿ ಉನ್ನತ ಶಿಕ್ಷಣ ಮಂತ್ರಿಯಾಗಿನಿಂದಾಗಲೂ ಕೂಡ ವಿರೋಧಪಕ್ಷದಿಂದಲೂ ಒಳ್ಳೆಯ ಮಂತ್ರಿಗಳೆಂಬ ಹೆಸರಿಗೆ ಪ್ರಖ್ಯಾತರಾದವರು, ಈ ಸಂದರ್ಭದಲ್ಲಿ ಸರ್ಕಾರದ ನಿಲುವನ್ನು ದೃಢಪಡಿಸುವಂತಹ ಅಗತ್ಯವಿದೆ, ಅದನ್ನು ಇವತ್ತು ಹೇಳಬೇಕಾಗುತ್ತದೆ. ಹಾಗೆ ಹೇಳುವುದಾದರೆ ಈ ಚರ್ಚೆಯನ್ನು ಉಪಾಧ್ಯಕ್ಷರೆ ಮುಂದಕ್ಕೆ ಹಾಕಿ.

ಡಾ: ಎ.ಬಿ. ಮಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, I crave your indulgence Mr. Deputy Speaker. In Parliamentary Democracyof course, Parliamentary tatics will be there. It is legitimate. ಸರ್ಕಾರಕ್ಕೆ ಜನರ ಹಿತದೃಷ್ಟಿಯಿಂದ, ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವರೀತಿ ಎಂಬರ್ರ್ಯಾಸ್ ಮಾಡಬೇಕೆನ್ನುವುದೆಲ್ಲಾ ನಡೆಯುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವು ನಿಮಗೆ ಎಂಬರ್ರ್ಯಾಸ್ ಮಾಡಲೇ ಇಲ್ಲ, ಕರಿಯಣ್ಣನವರು ನಿಮಗೆ ಎಂಬರ್ರ್ಯಾಸ್ ಮಾಡಿದ್ದಾರೆ, ಈಗ ನಾವೇನು ನಿಮಗೆ ಎಂಬರ್ರ್ಯಾಸ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ನೀವು (ಸರ್ಕಾರ) ಇಡೀ ರಾಜ್ಯಕ್ಕೆ ಎಂಬರ್ರ್ಯಾಸ್ ಮಾಡುತ್ತಿರುವ ಮುಂದೆ ನಮ್ಮದ್ದೇನೂ ಅಲ್ಲ.

ಡಾ: ಎ.ಬಿ. ಮಲಕರೆಡ್ಡಿ: ಮೂರನೇ ಮಹಡಿ ಸಮಿತಿಯ ಕೊಠಡಿಯಿಂದ ಇಲ್ಲಿಗೆ ಬರುವುದರಲ್ಲಿ ಏನೋ ಆಯಿತು ಎಂದೇನೂ ಹೇಳಿದ್ದೀರಲ್ಲಾ it is alright. We have taken in a good spirit. This is all legitimate. ಪಾರ್ಲಿಮೆಂಟ್ ವ್ಯವಸ್ಥೆಯಲ್ಲಿ ಇದೆಲ್ಲಾ ಇರಲೇ ಬೇಕು. ಆದರೆ ಸಮಿತಿ ಕೊಠಡಿಯಲ್ಲಿ ಮಾತನಾಡುವ ಕಾಲಕ್ಕೆ I really complimented Mr. Somashekar for having grasped the Constitutional legal licity involved. ಅವರು ಸುಮ್ಮನೆ ಕುಳಿತಿದ್ದಾರೆ, ಅದಕ್ಕೇ ನಾನು ಇವೆಲ್ಲಾ ಪಾರ್ಲಿಮೆಂಟರಿ ಟ್ಯಾಕ್ಟೀಸ್ ಎಂದು ಹೇಳಿದೆ; ಆ ಮಾತನ್ನು ಅವರು ಹೇಳಲಿಲ್ಲ. ಅದು ಬಯಲಿಗೆ ಬರಲಿಲ್ಲ. ಮಾನ್ಯ ಸುಬ್ಬಾರೆಡ್ಡಿಯವರು, ಖ್ಯಾತ ವಕೀಲರು ಯಾವ್ಯಾದು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳಬೇಕೋ ಅದನ್ನು ಹೇಳುತ್ತಾರೆ ಬೇರೆಯದನ್ನು ಹೇಳುವುದಿಲ್ಲ, ಸರ್ಕಾರಕ್ಕೆ ಕಾಳಜಿ ಇಲ್ಲ, ಬೇರೆಯವರು ದಾಕ್ಷಿಣ್ಯಕ್ಕೆ ಒಳಗಾಗುವ ಒಂದು ದೃಷ್ಟಿ ಕಂಡುಬರುತ್ತದೆ ಎಂದು ಹೇಳುತ್ತಾರೆ, ಈ ಸರ್ಕಾರಕ್ಕೆ ಅಂದರೆ ಕಾಂಗ್ರೆಸ್ ಸರ್ಕಾರಕ್ಕೆ ಏನು ಕಾಳಜಿ ಎನ್ನುವುದನ್ನು ಹೇಳುತ್ತೇನೆ. ನಾನು ಈ ವಿದ್ಯಾರ್ಥಿಕ್ಷೇತ್ರದಿಂದ ಬಂದವನು, ಪ್ರತಿಯೊಂದು ಹಂತದಲ್ಲಿ ಏನಾಗಿದೆ ಎಂಬುದೆಲ್ಲಾ ಗೊತ್ತಿದೆ. 1974 ರವರೆಗೆ ಮ್ಯಾನೇಜ್‌ಮೆಂಟ್ ಸೀಟು ಶೇಕಡ 65 ಇತ್ತು, ಶೇಕಡ 35 ಸೀಟುಗಳು ಮೆರಿಟ್ ಮೇಲೆ ಇರುತ್ತಿತ್ತು, ಇದರಲ್ಲಿ ಶೇಕಡ 10 ರಷ್ಟು ಮ್ಯಾನೇಜ್‌ಮೆಂಟ್ ಡಿಸ್ಕ್ರಿಷನರಿಗೆ ಇರುತ್ತಿತ್ತು, ಶೇಕಡ 25 ಫ್ರೀ ಸೀಟುಗಳು. 1974ರಿಂದ 1983ರವರೆ ಶೇಕಡ 75 ರಷ್ಟು ಸೀಟು ಮೇರಿಟ್ ಮೇಲೆ, ಕೇವಲ ಶೇಕಡ 25 ರಷ್ಟು ಕ್ಯಾಪಿಟೇಶನ್ ಸೀಟುಗಳು, 1983 ರವರೆಗೆ ಸರ್ಕಾರಗಳು ಇತ್ತು ಎಂಬುದು ಗೊತ್ತು, ಹೆಸರು ಹೇಳುವುದು ಬೇಡ. 1983 ಆದ ಮೇಲೆ ರಿವರ್ಸ್ ಆಯಿತು ಶೇಕಡ 65 ಸೀಟುಗಳು ಕ್ಯಾಪಿಟೇಶನ್ ಆಯಿತು, ಶೇಕಡ 10 ಮ್ಯಾನೇಜ್‌ಮೆಂಟ್ ಕೋಟಾ, ಶೇಕಡ 25 ರಷ್ಟು ಸೀಟುಗಳು ಕ್ಯಾಪಿಟೇಶನ್. ಒಂದು ಬದಲಾವಣೆ ಏನು ಮಾಡಿದರೆಂದರೆ 5 ಸೀಟುಗಳು ರೂ.50,000 ರೂಪಾಯಿಗಳವು 20 ಸೀಟುಗಳು ಪ್ರತಿಯೊಂದಕ್ಕೆ 1,25,000 ರೂಪಾಯಿಗಳು, ಆಗ ನಾನೇ ಅಧ್ಯಕ್ಷನಾಗಿದ್ದೆ, I can subscribe to the veracity. ಪ್ರತಿಶತ 75 ಸೀಟುಗಳು ಕ್ಯಾಪಿಟೇಷನ್ ಆಧಾರದ ಮೇಲೆ ಕೊಡುವ ವ್ಯವಸ್ಥೆ ಜನರ ಬಗ್ಗೆ ಹಾಗೂ ಪ್ರತಿಶತ 75 ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಯಾವ ಸರ್ಕಾರ ಕೊಟ್ಟಿತ್ತೋ ಆ ಸರ್ಕಾರಕ್ಕೆ ಕಾಳಜಿ ಇದೆಯೋ ಎನ್ನುವುದು ತಮಗೆ ಅರ್ಥವಾಗಿರಬೇಕು, ಇದರಿಂದ ಸರ್ಕಾರಕ್ಕೆ

ಕಾಳಜಿ ಇದೆ ಎನ್ನುವುದು ಅರ್ಥ ವಾಯಿತು. Then let me come to the capitation. Let us not mis-guide. This House is entitled to know the facts. We are not discussing in vaccum. We are discussing in a legislature. Supreme Court itself is in confusion. ಮೊದಲು ಸರ್ಕಾರ ರೂ.1,25,000 ಕ್ಯಾಪಿಟೇಷನ್ ಸೀಟಿಗೆ ನಿಗದಿ ಮಾಡಿತ್ತು, ಸುಪ್ರೀಂ ಕೋರ್ಟ್ ತೀರ್ಪು ಏನೆಂದು ಕೊಟ್ಟಿತು? ಉನ್ನಿಕೃಷ್ಣನ್ ತೀರ್ಪಿಗೆ ಕಾರಣಿಭೂತರ್‍ಯಾರು? ನಾನು ಹೇಳಿದಂತೆ 1983-93ರವರೆಗೆ ಸ್ವಚ್ಛಂದವಾಗಿ ಮ್ಯಾನೇಜ್‌ಮೆಂಟ್ ಸೀಟುಗಳನ್ನು ಕೊಡುವುದೇ ಕೊಡುವುದು, ಕ್ಯಾಪಿಟೇಷನ್ ಆಧಾರದ ಮೇಲೆ. The Supreme Court was simply enraged. And they had to give an executive judgment like that. ಪ್ರತಿಶತ 75 ರಷ್ಟು ಕ್ಯಾಪಿಟೇಷನ್, ಆ ಪುಣ್ಯಾತ್ಮರು ಏನು ಮಾಡಿದರು, it is only euphuemism between the word 'Capitation' and a fee structure ಸುಪ್ರೀಂ ಕೋರ್ಟ್ ಏನು ಮಾಡಿತು? ಶೇಕಡ 15 ರಷ್ಟು ಸೀಟುಗಳಿಗೆ ನೀವು ಇಪ್ಪತ್ತ ನಾಲ್ಕು ಲಕ್ಷರೂ ಕೊಡುತ್ತೀರಾ, You call it s fees? It is worse than the Capitation. Have you debated here? We have never debated. Have you talked of legislation? No. I am telling because we are discussing. That is why every one is entitled to know these facts 24 ಲಕ್ಷ ರೂಪಾಯಿಗಳನ್ನು ಕೊಡುವುದನ್ನು ಕ್ಯಾಪೀಟೇಷನ್ ಎಂದು ಕರೆಯತ್ತೀರೋ ಮತ್ತೋನೆಂದು ಹೇಳುತ್ತೀರಿ, Just because the Supreme Court discarded it and you call it a fee? And we have accepted it. Since 1993 it is going on. Now you are telling. ಈಗ ನೀವು ಬಡ ಮಕ್ಕಳಿಗೆ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ, ಅದನ್ನು ಯಾರ ಮಕ್ಕಳು ಕೊಡಬೇಕು? Alright, the Supreme Court has also said . Rs.1,30,000, Rs.70,000, Rs.80,000 ಮಾಡಿ Highly discarded.. ಅದಕ್ಕೆ ಈ 11 ನ್ಯಾಯಾಧೀಶ ನ್ಯಾಯಪೀಠ ಏನು ತೀರ್ಪು ಕೊಟ್ಟಿದೆ, They held their own judgment unconstitutional. Very strange. Such a thing had never happened in the 55 years of the history of Indian republic. Suppose if the judgment had not come, Unni Krishnan judgment would have prevailed. I will come to 1983-84, Because I was there as a Deputy Chairman at that time. ಆ ಕ್ಯಾಪಿಟೇಷನ್ ಅನ್ನು ಅಬಾಶ್ ಮಾಡಿದೇವೆಂದು ಕ್ರೆಡಿಟ್ ತೆಗೆದುಕೊಂಡಿರಿ, Because it was your manifesto. ಆಗ ಸರ್ಕಾರ ಮಾಡಿದ್ದೆಲ್ಲಾ ಕ್ಯಾಪಿಟೇಷನ್ ಎನ್ನಿಸಿಕೊಂಡಿತು, ಈ ಸರ್ಕಾರ ಕಾನೂನು ಮಾಡಿತು, ಅದೇ ಫೀಸ್‌ಗೆ you call it fees structure. ಮೊದಲಾದರೂ ರೂ.1.25,000 ರೂ ಇತ್ತು, ಅಮೇಲೆ ಕ್ಯಾಪಿಟೇಷನ್ ಅಬಾಲಿಷನ್ ಆ್ಯಕ್ಟ್ ಇದೆ ಎಂದು ಅದೇ ಫೀ, Instead of calling capitation, you call it fees structure. That is why said euphuemism. ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಯಾವ ರಾಜ್ಯದ ಲೆಜಿಸ್ಲೇಚರ್ ಕೂಡ ಎನ್ಯಾಕ್ಟ್‌ಮೆಂಟ್ ಮಾಡಿಫೈನಲ್ಲಿ ಮಾಡಲು ಆಗುವುದಿಲ್ಲ ಎಂದು ತಾವೇ ಹೇಳಿದ್ದೀರಿ. It has no right to nullify. I appreciate it. Only Parliament has to do that. If the Parliament has to do that, it will take time. Fastest

with all the concern for the Poor People ಮಾಡಿದರೂ it will take more than 5 months, not less than 5 months. Because they have to collect the opinions of all the states. ಆಮೇಲೆ ಕೊಲೇಟ್ ಮಾಡಬೇಕು. ಇನ್ನೊಂದು ಮೀಟಿಂಗ್ ಕರೆದು ಬಿಲ್ ಇಂಟ್ರೊಡ್ಯೂಸ್ ಮಾಡಿಬೇಕು ಅಷ್ಟರವರೆಗೆ ಪಾರ್ಲಿಮೆಂಟ್ ಕೂತಿರುವುದಿಲ್ಲ ಅದಕ್ಕಾಗಿ, in the in terregnum, what we have to do for this immediate year? The Central Government is also applying its mind. I am not telling that they are keeping quiet. They are also applying their mind. But, 1n the interregnum this year what we have to do, because Colleges will also have to survive. What is the philosophy they have enunciated? Why the situation came? We are all highly responsible people. What is the philosophy under which judgment was delivered? The philosophy is, they have enunciated in the judgment, we are only stuck up with the admission and fee structure. Why they gave this judgment? The philosophy is, they have enunciated- If the Government does not give any aid, it should not interfere. But, it should interfere in only two matters, No.1- maintenance of standard of education. The Government and university have got full role and authority to take care of the standard of education. No.2, I tried to get the information from Mr. Nanaiah in the morning .In unaided institutions they have got freedom to charge a particular fee. The Colleges have been established to take care of the local needs. Tommorrow, if Gulbarga Medical College Authority earmarks some 10% or 15% of the seats for the local people, they would have got right in the light of the judgment and this was the agrument advanced by Mr.Rama Jois, who is now the Governor of Jharkhand. He has said, certain Colleges have been opened to cater to the educational needs of the local area and hence the provision

has to be made, I think, 1n de£erence to his arguments, probably Supreme Court has made this arrangement. Article 371 was proposed to be amended for the sake of children. This point has been taken care already. Then things are designed in such a manner, we have to discuss these things within the parameter of the constitutional judgment. This is not a routine judgment of a Supreme Court Bench. It is a constitutional judgment.

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ಹೇಳುತ್ತಿರುವುದೆಲ್ಲಾ ಸರಿಯಾಗಿದೆ. ಬೇಕಾದರೆ ಅದರ ಬಗ್ಗೆ ಚರ್ಚೆ ಮಾಡೋಣ. ಈಗ ನಮಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ, ನಮ್ಮನ್ನೆಲ್ಲಾ ಕರೆಸಿದ್ದಿರಿ, ಬೆಳಿಗ್ಗೆ ಮೀಟಿಂಗ್ ಆಯಿತು. ಇದರ ಬಗ್ಗೆ ನಾವು ಅಡ್ಜರ್ನ್‌ಮೆಂಟ್ ಮೋಷನ್ ತಂದ ಮೇಲೆ, ಮಾನ್ಯ ಅಧ್ಯಕ್ಷರು ಅದನ್ನು ನಿಯಮ 69ಕ್ಕೆ ಪರಿವರ್ತಿಸಿ, ಅದರಡಿಯಲ್ಲಿ ಚರ್ಚೆ ಮಾಡಬಹುದು ಎಂದು ಹೇಳಿದರು. ಎಲ್ಲಾ ವಿರೋಧ ಪಕ್ಷಗಳ ಅಭಿಪ್ರಾಯವನ್ನು ತೆಗೆದುಕೊಳ್ಳಲು ಬೆಳಿಗ್ಗೆ ಮಿಟಿಂಗಿಗೆ ಕರೆಸಿದ್ದೆವು ಎಂದು ಹೇಳುತ್ತಿದ್ದೀರಿ. ಈಗ ನಮಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ, ನಮ್ಮೆಲ್ಲರ ನಿಲುವಿನ ಬಗ್ಗೆ ಚರ್ಚೆಯಾದ ನಂತರ, ಇದರ ಬಗ್ಗೆ ಸರ್ಕಾರದ ನಿಲುವೇನು ಎನ್ನುವುದು ನಮಗೆ ಗೊತ್ತಾಗಬೇಕು. ನೀವು ಹೇಳಿರತಕ್ಕಂಥಾದ್ದೆಲ್ಲಾ ವ್ಯಾಲೀಡ್ ಪಾಯಿಂಟ್‌ಗಳೇ, ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ನಾಳೆ ನೀವು ಏನು ಮಾಡುತ್ತೀರಿ ಎನ್ನುವುದು ನಮಗೆ ಗೊತ್ತಾಗಬೇಕು. ಮಾನ್ಯ ಜ್ಞಾನೇಂದ್ರರವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾಳೆ ಕ್ಯಾಬಿನೇಟ್‌ನಲ್ಲಿ ನೀವು ಚರ್ಚೆ ಮಾಡಿ ನಂತರ ಸದನಕ್ಕೆ ತಿಳಿಸಿ. ಆದರೆ ನಾನು ಹೇಳತಕ್ಕಂಥಾದ್ದು ಏನೆಂದರೆ, ಇನ್ ಪ್ರಿನ್ಸಿಪಲ್, ಪ್ರೈವೇಟ್ ಮೇನೇಜ್‌ಮೆಂಟ್ ಕಾಲೇಜುಗಳ ಅಡ್ಮಿಷನ್ನಿನ ಪರಮೋಚ್ಚ ಅಧಿಕಾರ ಸರ್ಕಾರದ ಕೈಯ್ಯಲ್ಲಿರಬೇಕು. ಆ ಅಸ್ತ್ರ ನಿಮ್ಮ ಕೈಯ್ಯಲ್ಲಿರಬೇಕು. ನಂತರ, ಫೀ ಸ್ಟ್ರಕ್ಚರ್ ಬಗೆಗಿನ ಅಧಿಕಾರವೂ ಸರ್ಕಾರದಲ್ಲಿರಬೇಕು. ಅದಕ್ಕೆ ನೀವು ಏನು ಕಾನೂನನ್ನು ಮಾಡಬೇಕೋ ಅದನ್ನು ಮಾಡಿಕೊಳ್ಳಿ. ನಾವು ಕೇಂದ್ರ ಸರ್ಕಾರಕ್ಕೆ ಹೋಗಬೇಕು, ಕನಿಷ್ಟ ವೆಂದರೆ ಐದು ತಿಂಗಳು ಬೇಕು ಎಂದು ಹೇಳುತ್ತಿದ್ದೀರಿ. ಅದನ್ನು ಒಪ್ಪಿಕೊಳ್ಳೋಣ. ಆದರೆ ಇದುವರೆಗೂ ನೀವು ಕೇಂದ್ರ ಸರ್ಕಾರವನ್ನು ಏಕೆ ಅಪ್ರೋಚ್ ಮಾಡಲಿಲ್ಲ? ಮೂರು ತಿಂಗಳಿನಿಂದ ಏನು ಮಾಡುತ್ತಿದ್ದಿರಿ? ಈ ಎಲ್ಲಾ ಪ್ರಶ್ನೆಗಳೂ ಬರುತ್ತವೆ. ನಾಳೆ ಬೆಳಿಗ್ಗೆ ಕ್ಯಾಬಿನೆಟ್ ಸೇರುತ್ತಿದೆ, ಅಲ್ಲಿ ಏನು ತೀರ್ಮಾನವಾಗುತ್ತದೆ ಎನ್ನುವುದನ್ನು ನಮಗೆ ತಿಳಿಸಿ. ಅದಾದ ಮೇಲೆ ನಾವು ಚರ್ಚೆಯನ್ನು ಮುಂದುವರೆಸೋಣ. ಜ್ಞಾನೇಂದ್ರ ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ, ನಂತರ ಇಲ್ಲಿ ಬನ್ನಿ. ಇಲ್ಲದಿದ್ದರೆ, ಈ ಸದನದಲ್ಲಿ ನಾವು ಮತ್ತೊಂದು ಸಲ ಸಿ ಇ ಟಿ ಬಗ್ಗೆ ಚರ್ಚೆ ಮಾಡಲು ಆಗುವುದಿಲ್ಲ. ಈ ಡಿಬೇಟನ್ನು ಮತ್ತೆ ಕಂಟಿನ್ಯೂ ಮಾಡಬೇಕಾಗುತ್ತದೆ. ಆದ್ದರಿಂದ, ತಾವು ದಯಮಾಡಿ ಇದರ ಬಗ್ಗೆ ನಾಳೆ ಕ್ಯಾಬಿನೆಟ್‌ಅನ್ನು ಕನ್ಸಲ್ಟ್ ಮಾಡಿ, ನಂತರ ಸದನದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿ. ಅದಾದ ಮೇಲೆ ನಾವು ಮುಂದುವರೆಸೋಣ.

ಡಾ: ಎ.ಬಿ. ಮಾಲಕರೆಡ್ಡಿ: ಸಿ ಇ ಟಿ ಗೆ ಸಂಬಂಧಪಟ್ಟಂತೆ ಸರ್ಕಾರದವರು ಈಗ ಹೇಳಲು ಆಗುವುದಿಲ್ಲ, ಈಗ ಉತ್ತರ ಕೊಡಲು ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈಗ ಹೇಳಿ ಎಂದು ನಾನು ಹೇಳುತ್ತಿಲ್ಲ. ನಾಳೆ ನೀವು ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ, ನಾಳೆ ಸಾಯಂಕಾಲ ಹೇಳಿ.

ಡಾ:ಜಿ. ಪರಮೇಶ್ವರ್: ನಾನು ಅದನ್ನೇ ಹೇಳಿದ್ದು. ಇನ್ ಪ್ರಿನ್ಸಿಪಲ್, ಮೆರಿಟ್ ಮತ್ತು ಸೋಷಿಯಲ್ ಜಸ್ಟೀಸನ್ನು ರಕ್ಷಣೆ ಮಾಡುತ್ತೇವೆ. ಅದಕ್ಕೆ ಬೇಕಾದಂಥ ನಿಯಮಗಳನ್ನು ರಚನೆ ಮಾಡುತ್ತೇವೆ. ನಾಳೆ ಕ್ಯಾಬಿನೆಟ್ ಮೀಟಿಂಗ್ ಇದೆ. ಇದು ಪಾಲಿಸಿ ಮ್ಯಾಟರ್ ಆದ್ದರಿಂದ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು. ಆ ಕಾರಣಕ್ಕಾಗಿ ನಾನು ಹೇಳಿದ್ದೇನೇ ವಿನಃ ನಾವು ಯಾರದೋ ಮುಲಾಜಿನಲ್ಲಿದ್ದೇವೆ, ಪ್ರೆಷರ್‌ನಲ್ಲಿದ್ದೇವೆ, ಅದು, ಇದು ಎನ್ನುವುದೆಲ್ಲಾ

ದಯಮಾಡಿ ಬೇಡ. ನಾನು ಮೊದಲೇ ಹೇಳಿದ್ದೇನೆ, ವಿನಂತಿ ಮಾಡಿಕೊಂಡಿದ್ದೇನೆ, ಈಗ ಮತ್ತೂ ಒಂದು ಸಾರಿ ಮನವಿ ಮಾಡಿಕೊಳ್ಳುತ್ತೇನೆ, ದಯಮಾಡಿ ಇದಕ್ಕೆ ಯಾವುದೇ ಒಂದು ರಾಜಕೀಯದ ಬಣ್ಣ ಬೇಡ. ಏಕೆಂದರೆ ಇದು ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಿತವನ್ನು ರಕ್ಷಣೆ ಮಾಡುವಂಥಾದ್ದು.

ಶ್ರೀ ಎಸ್. ಸುರೇಶ್ ಕುಮಾರ್: ಅಕಸ್ಮಾತ್ ಇದಕ್ಕೆ ಯಾವುದಾದರೂ ಬಣ್ಣ ಬಳಿಯುತ್ತಿದ್ದರೆ, ಅದು ಮೇನೇಜ್‌ಮೆಂಟ್ ಬಣ್ಣ. ಮೇನೇಜ್‌ಮೆಂಟ್ ಬಣ್ಣವನ್ನು ಬಳಿಯುತ್ತಿದ್ದೇವೆ, ರಾಜಕೀಯ ಬಣ್ಣವನ್ನು ಎಲ್ಲಿ ಬಳಿಯುತ್ತಿದ್ದೇವೆ?

ಡಾ: ಜಿ. ಪರಮೇಶ್ವರ್: ನಮಗೆ ಆ ಮೇನೇಜ್‌ಮೆಂಟ್ ಬಣ್ಣವೂ ಬೇಡ. ನೀವು ಹೇಳಿದ ಭಾಷೆಯಲ್ಲೇ ನಾವು ಹೇಳಬೇಕು ಎನ್ನುವುದೇನೂ ಇಲ್ಲ. ಬಗ್ಗುವುದಿಲ್ಲ, ಹಿಗ್ಗುವುದಿಲ್ಲ ಇದೆಲ್ಲಾ ತಾವು ಹೇಳಿದ ಬಾಷೆ. In principle I have said, we will reiterate again, that social justice and merit will be protected. ಆ ಕಾರಣಕ್ಕಾಗಿಯೇ, ಇನ್ ಪ್ರಿನ್ಸಿಪಲ್, ಏನು ನಿಯಮ ಬೇಕೋ ಅದನ್ನು ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಹೇಳಿದ್ದೇವೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ವಾದಮೇಲೆ ಅದು ಗೊತ್ತಾಗಲೇಬೇಕಲ್ಲವೇ?

ಶ್ರೀ ಡಿ.ವಿ. ಸದಾನಂದಗೌಡ: ಕ್ಯಾಬಿನೆಟ್‌ನಿಂದ ನಮಗೆ ಗೊತ್ತಾಗುವುದಿಲ್ಲ. ಆ ಬಗ್ಗೆ ತಾವು ಸದನದಲ್ಲಿ ಏನು ಹೇಳುತ್ತೀರಿ, ಅದರ ಬಗ್ಗೆ ನಮ್ಮ ಮಾತುಗಳು ಮತ್ತು ಚರ್ಚೆಗಳನ್ನು ನಾವು ಮಾಡಬೇಕಾಗಿದೆ. ಆದ್ದರಿಂದ, ಅಲ್ಲಿ ಮಾತ್ರವಲ್ಲ, ಸದನದಲ್ಲಿ ನೀವು ನಾಳೆ ಹೇಳಿ.

ಡಾ: ಜಿ. ಪರಮೇಶ್ವರ್: ಕ್ಯಾಬಿನೆಟ್ ಆದಮೇಲೆ ಮಾನ್ಯ ಇನ್‌ಫರ್ಮೇಷನ್ ಮಿನಿಸ್ಟರ್ ಕ್ಯಾಬಿನೆಟ್ ಬ್ರೀಫಿಂಗ್ ಮಾಡುತ್ತಾರೆ. ಅಲ್ಲಿ ಮಾಡುವುದು ಬೇಡ ಎಂದರೆ, ನಾವು ಇಲ್ಲೇ ಹೇಳಬಹುದು.

ಶ್ರೀ ಡಿ.ವಿ. ಸದಾನಂದಗೌಡ: ನಾಳೆಯೇ ಸದನದಲ್ಲಿ ಹೇಳಿ. ಆಮೇಲೆ ಡಿಬೇಟನ್ನು ಮುಂದುವರೆಸೋಣ.

ಡಾ: ಜಿ. ಪರಮೇಶ್ವರ್: ಇನ್‌ಫರ್ಮೇಷನ್ ಮಿನಿಸ್ಟರ್ ಬ್ರೀಫಿಂಗ್ ಮಾಡುತ್ತಾರೆ ಎಂದು ಹೇಳಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ: ಅವರು ಹೊರಗಡೆ ಬ್ರೀಫ್ ಮಾಡಿ. ಉನ್ನತ ಶಿಕ್ಷಣ ಸಚಿವರಾಗಿ ತಾವು ಇಲ್ಲಿ ಹೇಳಿಕೆ ಮಾಡಿ. ನಂತರ ಇಲ್ಲಿ ಡಿಬೇಟ್ ಆಗಬೇಕು.

ಶ್ರೀ ಬಿ. ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೇ, ನಿಯಮ 69ರಡಿಯಲ್ಲಿ ಸದನದಲ್ಲಿ ಎರಡು ವಿಷಯವನ್ನು ಚರ್ಚೆಯಾಗುತ್ತಿವೆ. ಒಂದು ಬರ ಪರಿಹಾರ ಬಗ್ಗೆ. ಅದನ್ನು ನಾವು ಇದಕ್ಕಿಂತ ಮೊದಲೇ ಚರ್ಚೆಗೆ ತೆಗೆದುಕೊಂಡಿದ್ದೆವು. ಎರಡನೆಯದು, ಸಿ ಇ ಟಿ ಬಗ್ಗೆ. ಅದು ಇನ್ನೂ ಜೀವಂತವಾಗಿದೆ. ಅದು ಇವತ್ತೇ ಅಂತ್ಯವಾಗ ಬೇಕಿತ್ತು. ಬೆಳಗಿನ ಸಭೆಯ ಪ್ರಕಾರ, ನಾವು ಇವತ್ತೇ ಚರ್ಚೆ ಮಾಡಿ, ನಮ್ಮ ತೀರ್ಮಾನವನ್ನು ಸದನದಲ್ಲಿ ಅನೌನ್ಸ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದರು. ಮುಖ್ಯಮಂತ್ರಿಗಳು ಮತ್ತು ಸಂಬಂಧ ಪಟ್ಟವರನ್ನು ಕನ್ಸಲ್ಟ್ ಮಾಡಿ ಇವತ್ತೇ ಹೇಳುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಈ ವಿಚಾರ ನಾಳಿನ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಬೇಕು ಎಂದು ಅವರಿಗೆ ಅನ್ನಿಸಿರಬೇಕು. ನಾವು ಅದಕ್ಕೆ ಅಡ್ಡಿ ಬರುವುದಿಲ್ಲ. ಮಾನ್ಯ ಜ್ಞಾನೇಂದ್ರರವರು ಹೇಳಿರತಕ್ಕಂಥ ಸಲಹೆ ಸೂಕ್ತವಾಗಿದೆ.

ಇದಕ್ಕಿಂತ ಮೊದಲೇ ಚರ್ಚೆ ಪ್ರಾರಂಭವಾಗಿದ್ದ ಬರಪರಿಹಾರದ ವಿಷಯ ಇನ್ನೂ ಜೀವಂತವಾಗಿದೆ. ಹಾಗೆಯೇ, ಇದೂ ಸಹ ನಾಳೆಯವರೆಗೆ ಜೀವಂತವಾಗಿರಲಿ. ನಾಳೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ಏನು ತೀರ್ಮಾನ ಮಾಡುತ್ತೀರಿ ಎನ್ನುವುದನ್ನು ನಾಳೆ ಇಲ್ಲಿಯೇ ಬಂದು ಅನೌನ್ಸ್ ಮಾಡಿ. ಅಧಿವೇಶನ ನಡೆಯುತ್ತಿರುವುದರಿಂದ ನಾಳೆ ತಾವು ಇಲ್ಲಿಯೇ ಸರ್ಕಾರದ ನಿಲುವನ್ನು ಅನೌನ್ಸ್‌ಮಾಡಿ. ಅಲ್ಲಿಯವರೆಗೆ ಇದು ಜೀವಂತವಾಗಿರಲಿ, ಏನೂ ತೊಂದರೆಯಾಗುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಎಲ್ಲರನ್ನೂ ಕರೆದು, ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕು. ನಂತರ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಬೇಕು ಎನ್ನುವುದಕ್ಕಾಗಿ ತಾವು ಇವತ್ತು ಸರ್ವಪಕ್ಷಗಳ ಸಭೆಯನ್ನು ಕರೆದಿದ್ದಿರಿ. ನಾನು ಹೇಳುವುದು ಇಷ್ಟೇ, ದಯವಿಟ್ಟು ಕೇಳಿ, ಇವತ್ತು ನೀವು ಎಲ್ಲರ ಅಭಿಪ್ರಾಯವನ್ನು ಕೇಳಿದ್ದೀರಿ, ಅದರಲ್ಲಿ ಸ್ವಲ್ಪ ವ್ಯತ್ಯಾಸಗಳು ಅಥವಾ ಮತ್ತೊಂದು ಇರಬಹುದು. ಅದನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಬಂದು ಎಲ್ಲಾ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು ಎನ್ನುವ ಇಚ್ಛೆಯಿಂದ ನೀವು ಮಾಡುತ್ತಿದ್ದೀರಿ. ಅದನ್ನು ನೀವು ಮಾಡಿ. ಅಲ್ಲಿ ಅವರ ಜೊತೆ ಚರ್ಚೆ ಮಾಡಿ, ನಾಳೆ ಪುನ: ಸದನಕ್ಕೆ ಬನ್ನಿ. ಏನು ತೀರ್ಮಾನ ವಾಯಿತು ಎನ್ನುವುದನ್ನು ಸದನದಲ್ಲಿ ಹೇಳಿ. ನಂತರ ಚರ್ಚೆ ಮುಂದುವರೆಯಲಿ. ನಂತರ ನಾವೊಂದು ತೀರ್ಮಾನಕ್ಕೆ ಬರೋಣ. ಈಗ ನಾವ್ಯಾರೂ ಕೂಡ ಬೇರೆಬೇರೆ ರೀತಿಯಲ್ಲಿ ಮಾತನಾಡಬೇಕು ಎಂದೇನೂ ಇಲ್ಲ. ಸಾಮಾಜಿಕ ಹಿತದೃಷ್ಟಿಯಿಂದ ಸಾಮಾಜಿಕ ನ್ಯಾಯಕ್ಕೆ ಒತ್ತುಕೊಟ್ಟು, ಇಡೀ ರಾಜ್ಯದ ಭವಿಷ್ಯದ ಬಗ್ಗೆ ಚಿಂತನ ಮಾಡುವಂಥ ಪ್ರಯತ್ನಗಳನ್ನು ನಾವೆಲ್ಲರೂ ಸೇರಿ ಮಾಡುತ್ತೇವೆ. ನಿಮ್ಮ ಜೊತೆಯಲ್ಲಿ ಸೇರಲೂ ನಾವು ರೆಡಿ ಇದ್ದೇವೆ. ಅದಕ್ಕಾಗಿಯೇ, ಇವತ್ತು ಬೆಳಿಗ್ಗೆ ನೀವು ಸಭೆ ಕರೆದಾಗಲೂ ನಾವು ಬಂದೆವು. ಇಲ್ಲಿಯವರೆಗೂ ನೀವು ನಮ್ಮನ್ನು ಕರೆಯಲಿಲ್ಲ ಎಂದು ನಾವು ಕೋಪ ಮಾಡಿಕೊಳ್ಳಲಿಲ್ಲ. ಅದಕ್ಕಾಗಿಯೇ ಹೇಳುತ್ತಿದ್ದೇವೆ, ನಾಳೆ ನೀವು ಮಂತ್ರಿಗಳಲ್ಲಿ ಅಥವಾ ಮತ್ತೊಬ್ಬರಲ್ಲಿ ಅಥವಾ ಕ್ಯಾಬಿನೆಟ್‌ನಲ್ಲಿ ಮಾತನಾಡಿ ನಂತರ ಸದನದಲ್ಲಿ ನಿಮ್ಮ ವಿಚಾರಗಳನ್ನು ಮಂಡನೆ ಮಾಡಿ. ಮತ್ತೆ ಡಿಬೇಟನ್ನು ಮುಂದುವರೆಸಿ ನಾವೆಲ್ಲರೂ ಸೇರಿ ಒಂದು ಇತ್ಯರ್ಥಕ್ಕೆ ಬರೋಣ.

ಡಾ: ಜಿ. ಪರಮೇಶ್ವರ್: ಕ್ಯಾಬಿನೆಟ್ ಸಭೆ ಇರತಕ್ಕಂಥಾದ್ದು ನಾಳೆ ಸಂಜೆ ಆರು ಗಂಟೆಗೆ.

ಶ್ರೀ ಡಿ.ವಿ. ಸದಾನಂದಗೌಡ: ಹಾಗಿದ್ದರೆ ನೀವು ಸೋಮವಾರ ಹೇಳಿ. We are ready.

ಡಾ: ಜಿ. ಪರಮೇಶ್ವರ್: ಆಗಬಹುದು.

**Dr. A.B. Malaka Reddy:** The Cabinet has got constitutional responsibilities and duties. It can take a decision and the Hon'ble Minister for Information can give information to the Press. ಇಲ್ಲೇ ಹೇಳಿಕೆ ಮಾಡಬೇಕು ಎಂದು ಕಡ್ಡಾಯವೇನೂ ಇಲ್ಲ. It has its own constitutional status.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಡಾ: ಮಾಲಕರೆಡ್ಡಿಯವರೇ, ನಿಮ್ಮಿಂದ ಈ ಉತ್ತರವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ ನೀವು ಪ್ರಿಸೈಡಿಂಗ್ ಆಫೀಸರ್ ಆಗಿದ್ದವರು. ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಈ ಸದನದಲ್ಲಿ ಚರ್ಚೆ ಮಾಡತಕ್ಕಂಥದ್ದು ಇನ್ನೂ ಮುಗಿದಿಲ್ಲ. ನಾವು ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ತಾವೇ ಹೇಳುತ್ತಿದ್ದೀರಿ. and it

is a policy matter. How can during the Session time, the policy matter be announced outside this House? How can it be allowed? ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿಲ್ಲ. ಯಾರು ಇಲ್ಲ ಎಂದು ಹೇಳಿದರು.

**Dr. A.B. Maalaka Reddy:** Individual Minister may not take. You will have the advantage of hearing it earlier.

ಶ್ರೀ ಡಿ.ವಿ. ಸದಾನಂದಗೌಡ: ಇಲ್ಲಿ ಇರುವಂಥ ಪ್ರಶ್ನೆ ಇಷ್ಟೆ. ನಾವೆಲ್ಲಾ ವಿಶ್ವಾಸದಿಂದ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುವಂಥ ವಾದವಿವಾದನಿಂದ ಇವತ್ತು ನಾವೆಲ್ಲಾ ಒಟ್ಟಿಗೆ ಸೇರಿದ್ದೇವೆ. ಇವತ್ತೂ ಕೂಡ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ನೀವು ಕ್ಯಾಬಿನೆಟ್ ಮುಂದೆ ಈ ವಿಷಯವನ್ನು ತೆಗೆದುಕೊಂಡು ಹೋಗಿ ಮತ್ತೆ ಇಲ್ಲಿಗೆ ಬನ್ನಿ. ನಾವು ಸೋಮವಾರ ಇದೇ ವಿಷಯದ ಬಗ್ಗೆ ಚರ್ಚೆಯನ್ನು ಮುಂದುವರಿಸಿ ಏನು ತೀರ್ಮಾನ ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಕರಿಯಣ್ಣ: ಮಾನ್ಯ ವಾರ್ತಾ ಮಂತ್ರಿಗಳೇ ಒಪ್ಪಿಕೊಳ್ಳುತ್ತಿದ್ದಾರೆ. ನಿಮಗೆ ಏಕೆ ...

ಶ್ರೀ ಎನ್. ಸುರೇಶ್ ಕುಮಾರ್: ಮಾನ್ಯ ಮಂತ್ರಿಯವರಲ್ಲಿ ಒಂದೇ ಒಂದು ಕ್ಲಾರಿಫಿಕೇಷನ್ ಕೇಳಿಬಿಡುತ್ತೇನೆ. ಫೀ ಸ್ಟ್ರಕ್ಚರ್ ಕಮಿಟಿ ಮಾಡಿದ್ದೀರಲ್ಲವೇ, ಅದರಲ್ಲಿ ನಾನು ನೋಡಿದ ಹಾಗೆ ಅದರಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಎಜ್ಯುಕೇಷನ್, ಆ ಮೇಲೆ ಎಕ್ಸ್ ವೈಸ್ ಚಾನ್ಸಲರ್, ಡೈರೆಕ್ಟರ್ ಆಫ್ ಹೋಮಿಯೋಪಥಿ ಹೀಗೆ ಎಲ್ಲವನ್ನೂ ಹೇಳಿದ್ದೀರಿ. CET Special Officer, who deals with this admissions ಕಾಲೇಜಸ್ ಬಗ್ಗೆ ಎಲ್ಲಾ ವಿವರಣೆ ಇರುವುದು, ಅವರ ಬಗ್ಗೆ ಎಲ್ಲಾ ಜ್ಞಾನ ಇದೆ, ಅವರನ್ನೂ ಸಹ ಈ ಲಿಸ್ಟ್‌ನಲ್ಲಿ ಸೇರಿಸಿದ್ದೀರಾ? Is he a Member in that Committee?

**Dr. A.B. Maalaka Reddy:** They will assist. It is routine thing.

ಶ್ರೀ ಎಸ್.ಸುರೇಶ್ ಕುಮಾರ್: ಅಸಿಸ್ಟೆನ್ಸ್ ಅವರು ಮಾಡುವುದು ಬೇರೆ. Is he a Member in that Committee? ಸಿ.ಇ.ಟಿ. ಏನು ಇದೆ ಅದರ ಸ್ಪೆಷನ್ ಆಫೀಸರ್ he should have been made a Committee Member.

**Dr. A.B. Maalaka Reddy:** We will invite him. No problem.

ಶ್ರೀ ಎಸ್. ಸುರೇಶ್ ಕುಮಾರ್: ಸ್ಪೆಷಲ್ ಇನ್‌ವೈಟ್ ಮಾಡುವುದು ಬೇಡ ನಮಗೆ ಸರ್ He should be a Member ಎಂದು ಹೇಳುತ್ತಿದ್ದೇವೆ. ಫೀ ಸ್ಟ್ರಕ್ಚರ್ ಗೆ ಏನು ಸ್ಪೆಷಲ್ ಕಮಿಟಿ ಮಾಡಿದ್ದಾರೆ ಅದಕ್ಕೆ ಸಿ.ಇ.ಟಿ. ಸ್ಪೆಷಲ್ ಆಫೀಸರ್ ಅವರನ್ನು ಮೆಂಬರ್ ಮಾಡಬೇಕು.

ಡಾ: ಎ.ಬಿ. ಮಾಲಕರೆಡ್ಡಿ: ಈಗಾಗಲೇ ಇದಕ್ಕೆ ಅಡಿಷನಲ್ ಚೀಫ್ ಸೆಕ್ರೆಟರಿ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದ್ದಾರೆ. because it cannot be called an Expert Committee, because Courts want Expert Committee's opinion ಆ ಕಾರಣಕ್ಕಾಗಿ ಬರೀ ಡಾಕ್ಟರ್ಸ್, ವೈಸ್‌ಚಾನ್ಸಲರ್, ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್, ಅವರನ್ನು ಸೇರಿಸಿಕೊಂಡು ಒಂದು ಎಕ್ಸ್‌ಪರ್ಟ್ ಕಮಿಟಿ ಎಂದು ಮಾಡಿದ್ದೇವೆ ಅಷ್ಟೆ. ಅದೇ ಉದ್ದೇಶದಿಂದ ಮಾಡಿದ್ದೇವೆ, ಮತ್ತೆ ಉಳಿದದ್ದು ಏನೂ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ನಾವು ಹೇಳುತ್ತಿರುವುದು we cannot call it as Expert Committee ಎಂದು. because experts are outside.

ಡಾ: ಎ.ಬಿ. ಮಾಲಕ ರೆಡ್ಡಿ: ಅವರನ್ನು ಇನ್‌ವೈಟೀಸ್ ಆಗಿ ತೆಗೆದುಕೊಳ್ಳಬಹುದು. Not as experts.

ಉಪಾಧ್ಯಕ್ಷರು: ಆಯಿತು, ಇವತ್ತು ಈ ಚರ್ಚೆ ಇಲ್ಲಿಗೆ ಮುಗಿಯಿತು ಎಂದು ಅನ್ನಿಸುತ್ತದೆ.

(ಗೊಂದಲ)

ಉಪಾಧ್ಯಕ್ಷರು: ಸ್ಟೇಟ್‌ಮೆಂಟ್ ಕೊಡುತ್ತಾರಲ್ಲಾ?

(ಗೊಂದಲ)

ಉಪಾಧ್ಯಕ್ಷರು: ಒಂದ್ನಿಮಿಷ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಿಮ್ಮ ಪ್ರಕಾರ ಸೋಮವಾರದ ದಿವಸ ಅವರು ಸ್ಟೇಟ್‌ಮೆಂಟ್ ಕೊಡುತ್ತಾರೆ, ನೀವು ಕೊಡಬೇಕೆಂದು ಹೇಳಿದಿರಿ ಅದರಂತೆ ಮಾಡುತ್ತಾರೆ. ಅಂದಮೇಲೆ ಇದರ ಬಗ್ಗೆ ಚರ್ಚೆ ಮುಗಿದ ಹಾಗೆ ಆಯಿತಲ್ಲವೇ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಅವರು ಸ್ಟೇಟ್‌ಮೆಂಟ್ ಸೋಮವಾರ ಮಾಡುವುದು ಇವತ್ತಿನ ಡಿಬೇಟ್‌ನ ಆಧಾರದ ಮೇಲೆ. ಆ ಸ್ಟೇಟ್‌ಮೆಂಟ್ ಕೊಡುವ ವರೆಗೂ this remains incomplete.

(ಗೊಂದಲ)

ಉಪಾಧ್ಯಕ್ಷರು: ಈಗ ಚರ್ಚೆ ಮುಗಿಯಿತು. ಸ್ಟೇಟ್‌ಮೆಂಟ್ ಬಾಕಿ ಉಳಿಯಿತು.

(ಗೊಂದಲ)

ಉಪಾಧ್ಯಕ್ಷರು: ಇನ್ನೂ ಚರ್ಚೆ ಮಾಡುವ ಹಾಗಿದ್ದರೆ ಇನ್ನೂ ಅರ್ಧ ಗಂಟೆ ಬೇಕಾದರೆ ಕುಳಿತುಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಅದರ ಮೇಲೆ ಡಿಪೆಂಡ್ ಆಗುತ್ತದೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಈಗ ಸ್ಟೇಟ್‌ಮೆಂಟ್ ಆಗಿದೆ. You can raise discussion on the situation arising out of the Statement ಇದ್ದೇ ಇದೆ.

ಉಪಾಧ್ಯಕ್ಷರು: ಕ್ಲಾರಿಫಿಕೇಷನ್ ಮಾಡುವುದಕ್ಕೆ ಅವಕಾಶ ಇದ್ದೇ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಿಯಮ 69ರ ಅಡಿಯಲ್ಲಿ ನಡೆಯುತ್ತಿರುವಂಥ ಚರ್ಚೆಯನ್ನು ಇವತ್ತೇ ಅದನ್ನು ಕ್ಲೋಸ್ ಮಾಡಬೇಕು ಎನ್ನುವುದು ಏಕೆ?

ಉಪಾಧ್ಯಕ್ಷರು: ಇದರ ಬಗ್ಗೆ ಚರ್ಚೆ ಮುಗಿಯಿತು. ಅನೌನ್ಸ್‌ಮೆಂಟ್ ಮಾತ್ರ ಉಳಿಯಿತು. ಆದಕ್ಕೆ ಬೇಕಾದಂಥ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಿಗೆ ಅವಕಾಶ ಇದ್ದೇ ಇದೆ. ಇಷ್ಟು ಹೇಳಿ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಎಂದು ಮುದೂಡುತ್ತಿದ್ದೇನೆ.

**(ಸದನವು ಸಂಜೆ 6 ಗಂಟೆ 34 ನಿಮಿಷಕ್ಕೆ ಮುಂದುಡಲ್ಪಟ್ಟು ಮುಕ್ತಾಯಗೊಂಡು ಪುನಃ ದಿನಾಂಕ:13-03-2003ನೇ ಗುರುವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು).**

## 7. ಅನುಬಂಧ I

### ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಂಥಾಲಯಗಳ ಸ್ಥಾಪನೆ

909 (1169) ಶ್ರೀ ಅಪ್ಪಚ್ಚು ರಂಜನ್ ಎಂಪಿ (ಸೋಮವಾರ ಪೇಟೆ): ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಸರ್ಕಾರ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಷ್ಟು ಗ್ರಂಥಾಲಯಗಳನ್ನು ತೆರೆಯುವುದಾಗಿ ಘೋಷಣೆ ಮಾಡಲಾಗಿತ್ತು?

ಆ) ಎಷ್ಟು ಗ್ರಂಥಾಲಯಗಳನ್ನು ತೆರೆಯಲಾಗಿದೆ: ತೆರೆಯಲು ಎಷ್ಟು ಬಾಕಿ ಇದೆ?

ಇ) ಉಳಿದ, ಗ್ರಂಥಾಲಯಗಳನ್ನು ತೆರೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಈ) ಗ್ರಂಥಾಲಯ ಮೇಲ್ವಿಚಾರಕರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ಹಣಕಾಸಿನ ಲಭ್ಯತೆ ಮೇರೆಗೆ ಹಂತ ಹಂತವಾಗಿ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಗ್ರಂಥಾಲಯಗಳನ್ನು ತೆರೆಯುವುದಾಗಿ ತಿಳಿಸಿದೆ.

ಆ) 3251 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಮಂಜೂರಾಗಿವೆ. ಇನ್ನು 2404 ತೆರೆಯಲು ಬಾಕಿ ಇದೆ.

ಇ) ಹಣಕಾಸಿನ ಲಭ್ಯತೆ ಮೇರೆಗೆ ಹಂತ ಹಂತವಾಗಿ ಗ್ರಂಥಾಲಯಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಈ) ಇಲ್ಲ

### ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಶಿಕ್ಷಣ ಸಂಯೋಜಕರಾಗಿ ನಿಯೋಜನೆಗೊಂಡಿರುವ ಅಧಿಕಾರಿ ಕರ್ತವ್ಯಕ್ಕೆ ಹಾಜರಾಗದಿರುವುದು

910 (1258) ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನ ಶಿಕ್ಷಣ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೆ.ಕೆ. ಮಂಜುನಾಥರವರನ್ನು ಕಿರಂಗಂದೂರು ಪ್ರೌಢ ಶಾಲೆಗೆ ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಿಯೋಜಿತ ಸ್ಥಳಕ್ಕೆ ಇನ್ನು ಕರ್ತವ್ಯದ ಮೇಲೆ ಹಾಜರಾಗದಿಲ್ಲದಿರುವುದು ನಿಜವೇ? - ಹಾಜರಾಗಿಲ್ಲದಿರುವುದಕ್ಕೆ ಯಾವ ಕ್ರಮ ಕೈಗೊಂಡಿದ್ದೀರಿ.